# ಕಂಪು

ಕಂನಡಿಗರ ಪಂಪು

ಮಲ್ಲಿಗೆ ಕನ್ನಡ ಸಂಘದ ಇ-ಪತ್ರಿಕೆ

ಸಂಕ್ರಾಂತಿ ಸಂಚಿಕೆ

ಸಂಪುಟ 1 ಸಂಚಿಕೆ 2

Newsletter of MKANT
Sankranthi 2011

www.mallige.org


## ಈ ಸಂಚಿಕೆಯಲ್ಲಿ


| | |
|---|---|
| ಸಂಕ್ರಾಂತಿ ಮತ್ತು Sesame Street | 1 |
| ಅಧ್ಯಕ್ಷರ ಸಂದೇಶ | 3 |
| ದೀಪಾವಳಿ ವರದಿ | 4 |
| ಸಂಕ್ರಾಂತಿ ರಂಗೋಲಿ | 5 |
| ಖೋ-ಖೋ ಕತೆ | 6 |
| ಚಿಣ್ಣರ ಚಿತ್ತಾರ | 7 |
| ಕನ್ನಡ ಕಲಿ | 8 |
| ಪದಬಂಧ | 9 |
| ನಗೆ ಮಲ್ಲಿಗೆ | 10 |
| ಶುಭಾಶಯ | 11 |
| ಮಲ್ಲಿಗೆ ಮೊಗ್ಗುಗಳು | 12 |
| Memoirs | 13 |
| ಸಂಪಾದಕೀಯ | 13 |
| ಪಾಕಂಪಪ್ಪು | 14 |
| ಹಿರಿಯರ ಹಾರೈಕೆ | 15 |
| ಶ್ರದ್ಧಾಂಜಲಿ | 16 |
| ನೆರೆಮನೆಯ ನರುಗಂಪು | 17 |
| ಚಿತ್ರಗಳು | 18 |


# ಸಂಕ್ರಾಂತಿ ಮತ್ತು Sesame Street


- ಸುಧಾ ಶ್ರೀನಾಥ್




**ವ**ರ್ಷ ೨೦೦೦, ಜನವರಿ ತಿಂಗಳ ಎರಡನೆಯ ಭಾನುವಾರ ನನ್ನ ನೆನಪಿನಲ್ಲಿ ಇನ್ನೂ ಹಚ್ಚ ಹಸಿರಾಗಿದೆ. ಹೌದು, ಅಂದು DFW Hindu Temple ನ 'ಅರಳು ಮಲ್ಲಿಗೆ' ಕನ್ನಡಶಾಲೆಯ ಮಕ್ಕಳೆಲ್ಲ ಖುಷಿ ಖುಷಿಯಾಗಿ ಅವರವರ ಮನೆಗಳಿಂದ ತಂದ ಎಳ್ಳು ಬೆಲ್ಲ ಹಂಚುವ ಆತುರದಲ್ಲಿದ್ದರು. ಅಂದು ನಮ್ಮ 'ಅರಳು ಮಲ್ಲಿಗೆ' ಕನ್ನಡ ಕ್ಲಾಸ್ನಲ್ಲಿ 'ಸಂಕ್ರಾಂತಿ' ಹಬ್ಬದ ಸಡಗರವೋ ಸಡಗರ. ಅದು 'ಅರಳು ಮಲ್ಲಿಗೆ' ಶಾಲೆಯ ಎರಡನೆಯ ವರ್ಷವಾದುದ್ದರಿಂದ ಮಕ್ಕಳಲ್ಲಿ ಹಾಗೂ ಅವರ ತಂದೆತಾಯಂದಿರಲ್ಲಿ ಒಳ್ಳೆಯ ಸಲುಗೆ, ಸ್ನೇಹ, ಸೌಹಾರ್ದತೆಗಳುಂಟಾಗಿದ್ದವು. ಮಕ್ಕಳಿಗೆ ಕರ್ನಾಟಕದಲ್ಲಿ ಆಚರಿಸುವ ಸಂಕ್ರಾಂತಿ ಹಬ್ಬವನ್ನು ಪರಿಚಯ ಮಾಡಿಸುವುದಕ್ಕೆ ಪ್ರಯತ್ನಿಸಬೇಕೆಂಬುದು ನಮ್ಮೆಲ್ಲರ ಆಶಯವಾಗಿತ್ತು. ನಮ್ಮ ಮಾತು ಕನ್ನಡ ಮತ್ತು Englishನ ಮಿಶ್ರಣದ 'ಕಂಗ್ಲಿಷ್'ನಲ್ಲಿ! ನಮ್ಮ ತರಗತಿಯಲ್ಲಿ ಓದು, ಬರಹ, ಮತ್ತು ವ್ಯಾಕರಣಗಳಿಗಿಂತ ಹೆಚ್ಚು 'ಹರಟೆ' ಇರುತ್ತಿತ್ತು.




ನಮ್ಮ 'ಅರಳು ಮಲ್ಲಿಗೆ' ಕನ್ನಡ ಕ್ಲಾಸ್ ಕರ್ನಾಟಕದ ಪ್ರಾಥಮಿಕ ಶಿಕ್ಷಣದ ತರಗತಿಗಳಂತೆ ಒಂದೇ ಓರಗೆಯ ಮಕ್ಕಳದ್ದಾಗಿರಲಿಲ್ಲ. ಕೆಲವು ಕುಟುಂಬಗಳಲ್ಲಿ ತಂದೆ ಅಥವಾ ತಾಯಿ ಕನ್ನಡೇತರರಾಗಿದ್ದರು. ಅವರಲ್ಲಿ ಕೆಲವರು ಮಕ್ಕಳ ಜೊತೆಯಲ್ಲಿ ಅವರೂ ಸಹ ನಮ್ಮ ಶಾಲೆಯಲ್ಲಿ ಕಲಿಯುವ ಆಸಕ್ತಿ, ಆಪೇಕ್ಷೆ ತೋರಿದರು. ಕನ್ನಡೇತರರನ್ನು ಮದುವೆಯಾದ ಯುವಕ ಯುವತಿಯರೂ ಬಂದು ಸೇರಿದರು. ಆದ್ದರಿಂದ ನಮ್ಮ ಕ್ಲಾಸ್ ಐದರಿಂದ ಹತ್ತರೊಳಗಿನ ವಯೋಮಿತಿಯ ಮಕ್ಕಳಜೊತೆ ಕೆಲವರು ಕನ್ನಡೇತರರಾದ ತಂದೆ ತಾಯಿಯರನ್ನೂ ಹಾಗೂ ಕೆಲವು ಯುವಕ ಯುವತಿಯರನ್ನೂ ಒಳಗೊಂಡಿತ್ತು. ಅವರಲ್ಲಿ ತಮಿಳು, ಹಿಂದಿ ಮತ್ತು ತೆಲುಗಿನವರಾದ ಯುವಕ ಯುವತಿಯರಿದ್ದರು. ಕನ್ನಡಿಗರನ್ನು ಮದುವೆಯಾದ ಕನ್ನಡೇತರರಲ್ಲಿ ಒಬ್ಬರು ಬಿಳಿಯ ಅಮೆರಿಕನ್ನರೂ ಇದ್ದು ನಮ್ಮ ತರಗತಿಯು ವೈವಿಧ್ಯಮಯ ಹಾಗೂ ವರ್ಣಮಯ ಸಂಗಮದಂತಿತ್ತು.

ನಮ್ಮ ತರಗತಿಯ ಉದ್ದೇಶವೂ ಸಹ ಕರ್ನಾಟಕದ ಪ್ರಾಥಮಿಕ ಶಿಕ್ಷಣದ ಉದ್ದೇಶದಂತೆ ತುಂಬಾ ಆಳವಾದದ್ದು ಮತ್ತು ಕ್ಲಿಷ್ಟಕರವಾದದ್ದಾಗಿರಲಿಲ್ಲ. ಅದು ವಿಭಿನ್ನ ರೀತಿಯದ್ದು ಮತ್ತು ತುಂಬಾ ಸರಳವಾದದ್ದು. ಅಮೆರಿಕದಲ್ಲಿ ನೆಲೆಸಿರುವ ಕನ್ನಡಬಾಂಧವರಿಗೆ ಕನ್ನಡ ಭಾಷೆಯ ಪರಿಚಯ ಮಾಡಿಸಿ, ಅದನ್ನು ಸಹಜವಾಗಿ ದಿನನಿತ್ಯದ ಸಂವಹನೆಯಲ್ಲಿ ಬಳಸುವುದನ್ನು ಸುಲಭ ಮಾಡುವುದು. ಹಾಗೂ ಕಲಿತದ್ದನ್ನು ಉಪಯೋಗಿಸುವುದಕ್ಕೆ ಪೂರಕವಾದ ಪರಿಸರ ರೂಪಿಸುವುದು ಮತ್ತು ಅವಕಾಶಗಳನ್ನು ಒದಗಿಸುವುದು. ಅಮೆರಿಕದಲ್ಲಿ ಹುಟ್ಟಿ ಬೆಳೆದ ಕನ್ನಡಬಾಂಧವರ ಮಕ್ಕಳು ಭಾರತಕ್ಕೆ ಹೋಗಿ ಅಜ್ಜ ಅಜ್ಜಿಯರನ್ನೂ ಮತ್ತು ಬಂಧುಗಳನ್ನು ಭೇಟಿಮಾಡಿದಾಗ ಪರಕೀಯರಂತಾಗದೆ ಸುಲಭವಾಗಿ ಬೆರೆಯುವಂತಾಗಬೇಕು. ಒಟ್ಟಿನಲ್ಲಿ ಮಕ್ಕಳಿಗೆ ಕನ್ನಡ ಸುಲಭವಾಗಿ ಮಾತಾಡುವ ಚಾಕಚಕ್ಯತೆ ಬರುವಂತೆ ಮಾಡಬೇಕೆನ್ನುವುದು ನಮ್ಮ ಉದ್ದೇಶವಾಗಿತ್ತು

ಧ್ವನ್ಯಾತ್ಮಕವಲ್ಲದ, ಸಂದಿಗ್ಧಮಯವಾದ ಇಂಗ್ಲೀಷನ್ನು ಕಲಿತ ಮಕ್ಕಳಿಗೆ ಧ್ವನ್ಯಾತ್ಮಕವಾದ ಕನ್ನಡ ತುಂಬಾ ಸುಸಂಬದ್ಧವೆನಿಸಿದ್ದು ನಮ್ಮ ಗಮನಕ್ಕೆ ಬಂತು. ಅವರಲ್ಲಿ ಆಸಕ್ತಿ ಉಳಿಸುವ ಮತ್ತು ಬೆಳಸುವ ಸಲುವಾಗಿ ಸೂಕ್ತ ಚಟುವಟಿಕೆಗಳನ್ನು ರೂಪಿಸಲು ಮತ್ತು ಹೆಚ್ಚಿಗೆ ಕಲಿಯಲು ಪ್ರೇರೇಪಿಸಲು ಸ್ನೇಹಿತರಿಂದ ತುಂಬಾ ಸಲಹೆ ಮತ್ತು ಸಹಕಾರಗಳು ದೊರೆತವು. . ಕಲಿತದ್ದನ್ನು ಪ್ರದರ್ಶಿಸಲು 'ಮಲ್ಲಿಗೆ ಕನ್ನಡ ಸಂಘ' ದ (ಇಂದಿನ MKANT) ವೇದಿಕೆ ಅವಕಾಶಗಳನ್ನು ಕೊಟ್ಟಿದ್ದು ತುಂಬಾ ಪೂರಕ ಮತ್ತು ಸ್ಫೂರ್ತಿದಾಯಕವಾಯ್ತು. ಮಾತಾಡುವುದಕ್ಕೆ ಒತ್ತು ಕೊಟ್ಟು,

ಎಲ್ಲರಿಗೂ ಮಕರ ಸಂಕ್ರಾಂತಿಯ ಹಾರ್ದಿಕ ಶುಭಾಶಯಗಳು

ಭಾಷೆಯನ್ನು ಕೇಳಿ ಕಲಿಯುವಂತೆ ಮಾಡಬೇಕೆನ್ನುವ ನಿಟ್ಟಿನಲ್ಲಿ ನಮ್ಮ 'ಹರಟೆ' ಸಾಗುತ್ತಿತ್ತು. ಸಂಕ್ರಾಂತಿ ಹರಟೆಯ ಕೆಲವು ತುಣುಕುಗಳು ಇಲ್ಲಿವೆ.



"ಸಂಕ್ರಾಂತಿ ಒಂದು ಸುಗ್ಗಿಯ ಹಬ್ಬ. ದಕ್ಷಿಣಭಾರತದಲ್ಲಿ ಹೊಸ ಅಕ್ಕಿ, ಹೆಸರುಬೇಳೆ, ಎಳ್ಳು ಮತ್ತು ಕಬ್ಬು ಈ ಸಮಯದಲ್ಲೇ ಫಸಲು ಬರುತ್ತಿತ್ತು. ಎಳ್ಳು ಬೆಲ್ಲ ಹಂಚಿ ಒಳ್ಳೆಯ ಮಾತಾಡಬೇಕೆಂದು ಶುರುವಾದ ರೈತರ ಹಬ್ಬ ಸಂಕ್ರಾಂತಿ. ಅಂದ್ರೆ ಸಂಕ್ರಾಂತಿ ಸಮಾಜದಲ್ಲಿ ಸ್ನೇಹ ಸೌಹಾರ್ದತೆಗಳು ಬೆಳೆಯಲೆಂದು ಆಚರಣೆಗೆ ಬಂದ ಹಬ್ಬಗಳಲ್ಲೊಂದು. ಎಳ್ಳು ಬೆಲ್ಲ ಹಂಚಿ ಒಳ್ಳೆಯ ಮಾತಾಡೋಣ್ವಾ?" ಶುರುವಾಯ್ತು ನಮ್ಮ ಸಂಕ್ರಾಂತಿಯ 'ಹರಟೆ'.

"ಆಂಟೀ, sesame seeds ಗೆ ಕನ್ನಡದಲ್ಲಿ ಎಳ್ಳು ಅನ್ಬೇಕಾ ಅಥವಾ ಎಳ್ಳ್ ಅನ್ಬೇಕಾ? My grandma says kaaru, bassu in India. So, I just want to clarify." ಪುಟ್ಟ ಪೋರನ ಪ್ರಶ್ನೆಗೆ ಎಲ್ಲರ ನಗುವೆ ಉತ್ತರವಾಯ್ತು.

ಬಸ್ ಮತ್ತು ಕಾರ್ ಇಂಗ್ಲೀಷ್ ಪದಗಳು. ಅವನ್ನು ಬಸ್ಸು, ಕಾರು ಯೆಂದು 'ಕನ್ನಡೀಕರಿಸು'ವ ಅಭ್ಯಾಸವುಂಟು. ಆದ್ರೆ ಎಳ್ಳು ಕನ್ನಡದ್ದೇ ಪದವೆಂದು ತಿಳಿಸಿ ಹೇಳಿದಾಗ ಅವನ ಮುಖದಲ್ಲಿ ಸಂತೃಪ್ತಿಯ ನಗೆ ಕಾಣಿಸಿತು. ಎಳ್ಳೂ ಬೆಲ್ಲ ಹಂಚುವ ಕಾರ್ಯಕ್ರಮದ ಸಡಗರ ಎಲ್ಲರಿಗೂ ಖುಷಿಕೊಟ್ಟಿತು. ಕೆಲವರು ಎಳ್ಳುಬೆಲ್ಲದ ಬರ್ಫಿ ಹಂಚಿದರು; ಒಬ್ಬರು ಮನೆಯಲ್ಲಿ ಮಾಡಿದ ಎಳ್ಳುಂಡೆ ಹಂಚಿದರು!



"'ನುವ್ವುಲು ಪಂಚಿ ನವ್ವುಲು ಪಂಚು' ಅಂತಾರೆ ತೆಲುಗಿನಲ್ಲಿ. 'ನುವ್ವುಲು' ಅಂದ್ರೆ ಎಳ್ಳು ಮತ್ತು 'ನವ್ವುಲು' ಅಂದ್ರೆ ನಗು ಅಥವಾ ಸಂತೋಷ. ಅಂದ್ರೆ ಎಳ್ಳು ಹಂಚಿ ನಗುವನ್ನು ಹಂಚು ಎಂದರ್ಥ" ಹೇಳಿದರು ತೆಲುಗಿನ ಯುವತಿಯೊಬ್ಬರು. "ಮನೆಯ ಮುಂದೆ ತುಂಬಾ ದೊಡ್ಡ ದೊಡ್ಡ ರಂಗೋಲಿಗಳನ್ನು ಹಾಕಿ ಹೂವಿಟ್ಟು decorate ಮಾಡ್ತಾರೆ. ರೈತರು ಹಸು, ಎತ್ತುಗಳನ್ನು ಅಲಂಕರಿಸಿ ಮನೆ ಮನೆಗೆ ಕರೆದುಕೊಂದು ಬರ್ತಾರೆ. ಅವರಿಗೆ gift ಕೊಡ್ತೇವೆ." ಹೆಚ್ಚಿನ ವಿವರಣೆ ಬಂದದ್ದು ಇನ್ನೊಬ್ಬ ತೆಲುಗಿನವರಿಂದ. ಆಂಧ್ರಪ್ರದೇಶದಲ್ಲಿ ಹುಟ್ಟಿ ಕನ್ನಡನಾಡನ್ನು ಮೆಟ್ಟಿದವರು ಅವರಿಬ್ಬರು.

"ಅದೇ ಅರ್ಥದಲ್ಲಿ ಹಿಂದಿಯಲ್ಲಿ 'ತಿಲ್ಗುಲ್ (ಎಳ್ಳು ಬೆಲ್ಲಗಳಿಂದ ಮಾಡಿದ ಸಿಹಿ) ಖಾಕೆ ಮೀಠಿ ಮೀಠಿ ಬೋಲ್'ಎನ್ನುತ್ತಾರೆ" ಮುಂಬೈಯಲ್ಲಿ ಹುಟ್ಟಿ ಬೆಳೆದ ಕನ್ನಡಮ್ಮನ ಸೊಸೆಯ ಮಾತು ಕೇಳಿ ಎಲ್ಲರಿಗೂ ಆಶ್ಚರ್ಯವೋ ಆಶ್ಚರ್ಯ.

"ಇದು ಪ್ರತಿ ವರ್ಷವೂ January 14/15th ಬರುತ್ತೆ. This is the only festival celebrated according to solar calendar while all other festivals in Karnataka go by lunar calendar" ಮನೆಯಿಂದ ಸಂಗ್ರಹಿಸಿದ ವಿಷಯವನ್ನರುಹಿದಳು ಐದು ವರ್ಷದ ಪುಟ್ಟಿಯೊಬ್ಬಳು.

"ಹೌದು, ಇದು ಸೌರಮಾನದ ಪ್ರಕಾರ ಆಚರಿಸುವ ಹಬ್ಬ. ಇದರ ಪೂರ್ತಿ ಹೆಸರು 'ಮಕರ ಸಂಕ್ರಾಂತಿ' ಯೆಂದು. Makara Sankraanti, or the transition of the Sun from Dhanu raashi (Sagittarius) to Makara raashi (Capricorn) happens on January the 14/15th. ನಮ್ಮ ಪೂರ್ವಿಕರ ಹಬ್ಬಗಳಲ್ಲಿಯೂ ಎಷ್ಟು ಕೌತುಕಮಯ ವಿಷಯಗಳಿರುತ್ತೆ, ಅಲ್ವೇ?"

"ಹೌದು. ನಾವುಗಳು 'ಸಂಕ್ರಾಂತಿ'ಯನ್ನು 'ಪೊಂಗಲ್' ಎಂದು ಆಚರಿಸುತ್ತೀವಿ. ಹಬ್ಬದ ದಿನ ಹೊಸ ಅಕ್ಕಿ, ಹೆಸರುಬೇಳೆ, ಸಕ್ಕರೆ, ಹಾಲು, ಏಲಕ್ಕಿ ಹಾಕಿ ಮಾಡುವ 'ಪೊಂಗಲ್' ಅಂದಿನ special dish ಆಗಿರುತ್ತೆ", ಹೇಳಿದವರು ಮೂಲತಃ ಚೆನ್ನೈನವರು

. "In fact, archaeological findings prove that the Mayans in Latin America celebrated something similar to Sankraanthi with Pongal, Pala kayalu, as some kind of spring festival." ಕನ್ನಡಮ್ಮನ ಅಮೆರಿಕನ್ ಸೊಸೆಯ ಮಾತು ಕೇಳಿ ನಮ್ಮೆಲ್ಲರಿಗೂ ಇಡೀ ವಿಶ್ವದ ಜನತೆಯ ಬಗ್ಗೆ ವಿಶ್ವಭ್ರಾತೃತ್ವದ ಭಾವ ಮೂಡಿ ರೋಮಾಂಚನದ ಅನುಭವವಾಯ್ತು. ಅವರು ಮುಂದುವರಿಸುತ್ತಾ "ನನಗೆ ಎಳ್ಳು allergy ಇದೆ. ನಾನು ಎಳ್ಳು ತಿನ್ನುವುದಿಲ್ಲ. ದಯವಿಟ್ಟು ಕ್ಷಮಿಸಿ" ಯೆಂದರು.

"ನಂಗೇನೂ ಅಲರ್ಜಿಯಿಲ್ಲ. ಆದ್ರೆ ಇಷ್ಟೊಂದು ಎಳ್ಳು ಒಂದೇಸಲ ತಿನ್ನೋದ್ ನನ್ನ ಕೈಲಾಗೋಲ್ಲ." ಅಮ್ಮ ಹೇಳಿದ ಮಾತು ಕೇಳಿ "ಕೈಲಾಗೋಲ್ಲ ಅಂದ್ರೆ ತಪ್ಪು. ತಿನ್ನೋದು ಬಾಯಿಯಲ್ಲಾ? ಬಾಯಿಯಲ್ಲಾಗೋಲ್ಲ ಅನ್ಬೇಕಲ್ವಾ?" ಪ್ರಶ್ನಿಸಿದ್ದು ಅವರ ಆರು ವರ್ಷದ ಮಗಳು. "ಕೈಲಾಗುವುದಿಲ್ಲ means it's not possible. It's used idiomatically." ಸಂಶಯ ನಿವಾರಿಸಿದ್ದು ತಾಯಿಯೇ.

"ಚಳಿಗಾಲದಲ್ಲಿ ದೇಹಕ್ಕೆ ಉಷ್ಣವರ್ಧಕ ಆಹಾರಗಳು ಅಗತ್ಯ. ಎಳ್ಳು ಮತ್ತು ಬೆಲ್ಲ ತಿನ್ನುವುದರಿಂದ ಚಳಿ ತಡೆಯುವ ಶಕ್ತಿ ಹೆಚ್ಚಾಗುವುದಂತೆ," ಅಂದರು ಕ್ಲಾಸಿಗೆ ಮಗನನ್ನು ಪ್ರತಿ ಭಾನುವಾರ ತಪ್ಪದೆ ಕರೆತರುವ ತಂದೆಯೊಬ್ಬರು.

*ಎಳ್ಳು ಬೆಲ್ಲ ತಿನ್ನಿ - ಒಳ್ಳೊಳ್ಳೆ ಮಾತಾಡಿ*

ಹೀಗೆ ನಾವುಗಳು ಬರಿಯ ಕರ್ನಾಟಕದಷ್ಟೇ ಅಲ್ಲ ನಮ್ಮ ನೆರೆಯ ರಾಜ್ಯಗಳವರ ಸಂಕ್ರಾಂತಿಯ ಬಗ್ಗೆಯೂ (ಕನ್ನಡದಲ್ಲಿ ಮಾತಾಡುವ ಮೂಲಕ) ಸ್ವಲ್ಪ ತಿಳಿದುಕೊಂಡದ್ದಾಯ್ತು. ಮಹಾಭಾರತದಲ್ಲೂ ಸಂಕ್ರಾಂತಿಯ ಮಹತ್ವದ ಬಗ್ಗೆ ಉಲ್ಲೇಖವಿದೆ. ಉದಾಹರಣೆಗೆ ಇಚ್ಛಾಮರಣಿಯಾದ ಭೀಷ್ಮಾಚಾರ್ಯರು ದೇಹತ್ಯಾಗಮಾಡಲು ಸಂಕ್ರಾಂತಿಗಾಗಿ ಕಾಯುವುದರ ವಿಚಾರ ತಿಳಿಸಿದಾಗ ಮಹಾಭಾರತದ ಬಗ್ಗೆ ಮಕ್ಕಳ ಕುತೂಹಲ ಇನ್ನೂ ಹೆಚ್ಚಾಯಿತು.

ಕ್ಲಾಸ್ ಮುಗಿಸಿ ಹೊರಗೆ ಬರುತ್ತಿದ್ದಹಾಗೆ "Aunty! She pulled my ಎಳ್ಳು packet and tore it. See, now sesame seeds are all over the place" ಪುಟಾಣಿಯೊಬ್ಬನ ಅಳಲು.

"ಎಲ್ಲಾ clean ಮಾಡೋಣ. ಇಲ್ಲಾಂದ್ರೆ ಇದೊಂದು sesame street ಆಗುತ್ತೆ."

"I love watching sesame street cartoon and I love this sesame ball too". ಅಮೆರಿಕನ್ನಳ ಮೂರುವರ್ಷದ ಪುಟ್ಟ ಮಗನು ಎಳ್ಳುಂಡೆ ತಿನ್ನುತ್ತಾ ಹೇಳಿದ.

ಕರ್ನಾಟಕದ ಸಂಸ್ಕೃತಿಯನ್ನು, ಸಭ್ಯತೆಯನ್ನು ಸಾರುತ್ತ ನಮ್ಮ 'ಅರಳು ಮಲ್ಲಿಗೆ'ಯು ಪ್ರತಿ ಭಾನುವಾರವೂ ಪರಿಮಳವನ್ನು ಹೆಚ್ಚೆಚ್ಚಿಗೆ ಬೀರುತ್ತ ಸಂತಸದ ಹಬ್ಬದ ವಾತಾವರಣವನ್ನುಂಟುಮಾಡುತ್ತಾ ಸಾಗುತ್ತಾ ಇದೆ. ಸ್ವಯಂಸೇವಕರ ಪರಿಶ್ರಮದಿಂದ ಮತ್ತು ಹಲವಾರು ಪೋಷಕರ ಸಹಕಾರದಿಂದ 'ಅರಳು ಮಲ್ಲಿಗೆ' ಹನ್ನೆರಡು ಸಂಕ್ರಾಂತಿಗಳನ್ನು ಕಂಡಿದೆ. DFW ನ ಸಮಸ್ತ ಕನ್ನಡಿಗರಿಗೂ ಸಂಕ್ರಾಂತಿಯ ಶುಭಾಶಯಗಳು!

## ಅಧ್ಯಕ್ಷರ ಸಂದೇಶ

- ರಾಜಶ್ರೀ ರಮೇಶ್



ಮಲ್ಲಿಗೆ ಸಂಘದ ನನ್ನ ಬಂಧು ಮಿತ್ರರೆ,

ನಿಮಗೆ ಮತ್ತು ನಿಮ್ಮ ಕುಟುಂಬದವರಿಗೆ ಮಕರ ಸಂಕ್ರಾಂತಿಯ ಹಾರ್ದಿಕ ಶುಭಾಶಯಗಳು.

ಎಲ್ಲಾದರು ಇರು, ಎಂತಾದರು ಇರು, ಎಂದೆಂದು ಕನ್ನಡವಾಗಿರು ಅಂಥ ಇರೊ ಕವಿಯ ಹರಕೆಯನ್ನು ನಮ್ಮ ಮಲ್ಲಿಗೆ ಸಂಘ ಕಾರ್ಯರೂಪಕ್ಕೆ ತಂದಿದೆ ಅಂಥ ಹೇಳಲು ಹೆಮ್ಮೆ ಪಡುತ್ತೀನಿ. ನಮ್ಮ ತವರೂರಿಂದ ಸಾವಿರಾರು ಮೈಲಿ ದೂರ ಬಂದು ನೆಲಸಿ, ಇಲ್ಲಿನ ಜೀವನಶೈಲಿಯ ಬಳಕೆ ಆಗಿದ್ದರೂ, ನಮ್ಮ ಮೂಲವನ್ನು ಬಿಡದೆ, ನಮ್ಮ ಮಾತೃ ಭಾಷೆಯನ್ನು ಉಳಿಸಲು, ಬೆಳಸಲು ಪ್ರಯತ್ನ ಪಡುತ್ತಿದ್ದೇವೆ. ಅದಕ್ಕೆ ನಮ್ಮ ಮಲ್ಲಿಗೆ ಕನ್ನಡದ ಕಂಪನ್ನು ಹರಡಿ, ನೆರವಾಗುತ್ತಿದೆ. ಮಲ್ಲಿಗೆ ಕಂಪು ನಮ್ಮೆಲ್ಲರ ಜೀವನದ ದಣಿವನ್ನು ಆರಿಸಲು ನೆರವಾಗುತ್ತಿದೆ.

ಪ್ರಸ್ತುತ ಅವಧಿಯ ಸಮಿತಿಗೆ ಅಧ್ಯಕ್ಷೆ ಆಗಿ, ಕನ್ನಡಕ್ಕೆ ಅಳಿಲು ಸೇವೆ ಮಾಡಲು ಅವಕಾಶ ಸಿಕ್ಕಿರುವುದು ನನ್ನ ಭಾಗ್ಯ ಎನ್ನ ಬಹುದು. ಈ ಅವಕಾಶ ನೀಡಿರುವ ನಿಮ್ಮೆಲ್ಲರಿಗು ಮತ್ತೊಮ್ಮೆ ನನ್ನ ಹೃತ್ಪೂರ್ವಕ ಧನ್ಯವಾದಗಳು. ಮಲ್ಲಿಗೆ ಕಾರ್ಯಕಾರಿ ಸಮಿತಿ ಸದಸ್ಯರು ಹಾಗು ಉತ್ಸಾಹಿ ಸ್ವಯಂಸೇವಕರು ತಮ್ಮನ್ನು ಸಂಪೂರ್ಣವಾಗಿ ಕನ್ನಡ ಸೇವೆಗೆ ತೊಡಗಿಸಿಕೊಂಡು, ಕಳೆದ ದೀಪಾವಳಿ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಿ, ಇನ್ನೂ ಒಳ್ಳೆ ಕಾರ್ಯಕ್ರಮಗಳನ್ನು ಕೊಟ್ಟು ಸಾರ್ಥಕತೆ ಪಡೆಯಬೇಕೆಂದು ಆಸೆ ಇಟ್ಟುಕೊಂಡಿದ್ದೀವಿ.

ನಮ್ಮ ಕನ್ನಡಿಗರ ಕನ್ನಡ ಓದುವ ಹಸಿವನ್ನು ತಣಿಸಲು "ಕಂಪು" ಈ-ಪತ್ರಿಕೆ ಸಿದ್ಧವಾಗಿದೆ. ಅದರ ಸಾರಥ್ಯ ವಹಿಸಿರುವ ಶ್ರೀಮತಿ ಪೂರ್ಣಿಮ ಸುಬ್ರಹ್ಮಣ್ಯ ಅವರಿಗೆ ಮತ್ತೊಮ್ಮೆ ನನ್ನ ಹೃತ್ಪೂರ್ವಕ ಅಭಿನಂದನೆಗಳು. ಇವರು, ಅನೇಕ ಹೊಸ ಬಗೆಯ ಅಂಕಣಗಳನ್ನು ಗುರುತಿಸಿ ಎಲ್ಲರಿಗೂ ಮನಮುಟ್ಟುವ ರೀತಿಯಲ್ಲಿ, ಕನ್ನಡ ಕಂಪನ್ನು ಹೊಮ್ಮಿಸಲು ತುಂಬಾ ಆಸಕ್ತಿ ವಹಿಸಿದ್ದಾರೆ ಎಂದು ಹೇಳಲು ಆಶಿಸುತ್ತೀನಿ.

ಸಹೃದಯರಾದ ಎಲ್ಲ ಮಲ್ಲಿಗೆ ಬಾಂಧವರೂ ಕಂಪು ಈ-ಪತ್ರಿಕೆಯನ್ನು ಓದುವುದರೊಂದಿಗೆ ತಮ್ಮ ಲೇಖನಗಳನ್ನು ಬರೆದು ಕಳಿಸಿ ನಿಮ್ಮ ಸಹಕಾರ ತೋರಿಸಬೇಕೆಂದು ನನ್ನ ವಿನಮ್ರ ಕೋರಿಕೆ.

೨೦೧೧ ವರ್ಷದ ಮಲ್ಲಿಗೆ ಮೊದಲ ಕಾರ್ಯಕ್ರಮ ಉಗಾದಿ ಹಬ್ಬದ ಆಚರಣೆ. ಇನ್ನು ಕೆಲವೇ ದಿನಗಳಲ್ಲಿ ನಿಮಗೆ ಅದರ ವಿವರ ತಿಳಿಸುತ್ತೀವೆ. ಸಾಂಸ್ಕೃತಿಕ ಕಾರ್ಯಕ್ರಮಗಳ ಆಯೋಜಕರು ತಮ್ಮ ಪ್ರತಿಭೆಯನ್ನು ಎಲ್ಲರೊಡನೆ ಹಂಚಿಕೊಳ್ಳಲು ಸಿಗುವ ಒಳ್ಳೆ ಅವಕಾಶಕ್ಕೆ ಸಿದ್ಧರಾಗಿ.

ಈ ಹೊಸ ವರ್ಷ, ೨೦೧೧, ನಿಮಗೆ ಮತ್ತು ನಿಮ್ಮ ಕುಟುಂಬದವರಿಗೆ ಒಳ್ಳೆ ಆರೋಗ್ಯ, ಯಶಸ್ಸು ತಂದು ಮಂಗಳಕರವಾಗಲಿ!

ಇಂತಿ ನಿಮ್ಮ ವಿಶ್ವಾಸಿ,
ರಾಜಶ್ರೀ ರಮೇಶ್

*ಹೊಸ ಬಗೆಯಲಿ ತರಲಿ , ಸುಖ ಸಾವಿರ ತರಲಿ*

*- ಲಕ್ಷ್ಮೀನಾರಾಯಣ ಭಟ್ಟ*

# ದೀಪಾವಳಿ ವರದಿ



-ವೀಣಾ ಕೃಷ್ಣಸ್ವಾಮಿ.

ದೀಪಾವಳಿಯು ಪಟಾಕಿಯ ಸುರಿಮಳೆಯನ್ನೆ ಹರಿಸುವ ಸಡಗರ ತುಂಬಿದ ಸುಂದರವಾದ ಹಬ್ಬ. ಈ ಹಬ್ಬದಲ್ಲಿ ಎಳೆ ಹುಡುಗರಿಂದ ಹಿಡಿದು ವಯೋವೃದ್ಧರವರೆಗೂ ಹೊಸ ಉಡುಗೆಗಳನ್ನು ತೊಟ್ಟು, ಮನೆಗಳನ್ನು ದೀಪಗಳಿಂದ ಅಲಂಕರಿಸಿ, ಸಿಹಿ ತಿನಿಸುಗಳನ್ನು ತಿಂದು, ಪಟ್, ಪಟ್ ಪಟಾಕಿಯ ಸದ್ದುಗಳನ್ನು ಮಾಡುತ್ತಾ ಸಂಭ್ರಮದಿಂದ ಕೊಂಡಾಡುವ ರೂಢಿ ಇದೆ. ಇಂತಹ ಒಂದು ಹಬ್ಬವನ್ನು ಡಾಲ್ಲಸ್ ಕನ್ನಡ ಸಂಘವು ಇಲ್ಲಿರುವ ಕನ್ನಡಿಗರು ಒಟ್ಟಾಗಿ ಕೊಂಡಾಡಲೆಂದು ಅಕ್ಟೋಬರ್ ೩೦ ೨೦೧೦, ರಂದು ಗ್ರಾನ್ ವಿಲ್ ಆರ್ಟ್ಸ್ ಸೆಂಟರ್ ನಲ್ಲಿ ಏರ್ಪಡಿಸಿತ್ತು. ಬಣ್ಣ ಬಣ್ಣದ ಉಡುಗೆ ತೊಡುಗೆಗಳನ್ನು ಉಟ್ಟು ಬಂದ ಕನ್ನಡಿಗರು ಹೆಚ್ಚಿನ ಸಂಖ್ಯೆಯಲ್ಲಿ ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಆ ಸಂಜೆಯ ಸಾಂಸ್ಕೃತಿಕ ಹಾಗು ಮನೋರಂಜನೆ ಕಾರ್ಯಕ್ರಮಗಳು ಅತಿಶಯವಾಗಿತ್ತೆಂದರೆ ಹೆಚ್ಚಾಗಲಾರದು.



ಸಭೆಯನ್ನು ಶ್ರೀಮತಿ. ರಾಜಶ್ರೀರವರು ಸ್ವಾಗತಿಸಿದ ನಂತರ ಶ್ರೀಮತಿ. ಶಿಲ್ಪ ಮತ್ತು ಶ್ರೀ. ನಾಗರಾಜ್ ರವರ ಹಾಸ್ಯಭರಿತ ತುಣುಕುಗಳೊಂದಿಗೆ ಮೂಡಿ ಬಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಪಟಾಕಿಯ ಸುರಿಮಳೆಯಂತೆಯೆ ಇತ್ತು. ಶ್ರೀಮತಿ. ಅನುಪಮ ವಿಶ್ವನಾಥ್ ಅವರಿಂದ ತಯಾರಾದ ಪುಟಾಣಿ ಮಕ್ಕಳು ವಿಘ್ನ ವಿನಾಯಕನನ್ನು ನಮಿಸಿ ಕಾರ್ಯಕ್ರಮ ಸುಗಮವಾಗಿ ನೆರವೇರಲೆಂದು ಬೇಡಿದರು.

ಕನ್ನಡ ಕಲಿಸುವ ಶ್ರಮ ವಹಿಸಿರುವ ಶ್ರೀಮತಿ. ಜಯಶ್ರೀ ಮೂರ್ತಿ ಹಾಗು ಶ್ರೀಮತಿ. ಶೀಲ ಹರೀಶ್ರವರು, ಕನ್ನಡ ಶಾಲೆಯ ಪುಟಾಣಿ ಮಕ್ಕಳಿಂದ ವಿವಿಧ ಶಬ್ದಗಳ ಹಾಡಿಗೆ ತಕ್ಕಂತ ಅಭಿನಯವನ್ನು ಮಾಡಿಸಿ ಸುಂದರವಾಗಿ ನೆರವೇರಿಸಿದರು. ಇದರ ಹಿಂದೆಯೆ ಶ್ರೀಮತಿ. ವಸುಂದರ ಕಿಕ್ಕೇರಿಯವರ ನೇತೃತ್ವದಲ್ಲಿ ಮೂಡಿಬಂದ ಪಿಟೀಲು ಹಾಗು ವೀಣಾವಾದನ ಪ್ರದರ್ಶನ ಸಂಗೀತ ಪ್ರಿಯರ ಮನಸೆಳೆಯಿತು. ಮಕ್ಕಳಲ್ಲಿ ಸಂಗೀತ ಕಲಿಯುವ ಉತ್ಸಾಹ ಮತ್ತು ಶ್ರದ್ದೆ ಈ ಕಾರ್ಯಕ್ರಮದಲ್ಲಿ ಎದ್ದು ಕಾಣುತ್ತಿತ್ತು. ಕಲೆಯಲ್ಲಿ ನಾಮುಂದು ತಾಮುಂದೆಂದು ತೋರಲು ಬಂದ ಶ್ರೀಮತಿ. ಮಮತಾ ದೀಪಕ್ ರವರ ತರಬೇತಿಯಲ್ಲಿ ಕಲಿತ ಮಕ್ಕಳು ಆನೆಬಂದಿತಮ್ಮ ದೇವರನಾಮಕ್ಕೆ ಹೆಜ್ಜೆ ಹಾಕಿದ್ದು ಅತಿಶಯವಾಗಿತ್ತು. ಇತ್ತೀಚೆಗಷ್ಟೆ ಭಾರತಕ್ಕೆ ಭೇಟಿನೀಡಿದ ಮಕ್ಕಳು ದಸರ ದೀಪಾವಳಿಯ ಹಬ್ಬವನ್ನು ಹೇಗೆ ಆಚರಿಸಿದರೆಂಬ ಅನುಭವವನ್ನು ಬಹಳ ಸುಂದರವಾಗಿ ಕನ್ನಡದಲ್ಲಿ ಪ್ರೇಕ್ಷಕರೊಂದಿಗೆ ಹಂಚಿಕೊಂಡರು. ಇಂತಹ ಹಾಸ್ಯಭರಿತ ರೂಪಕದ ಸೂತ್ರಧಾರಿ ಶ್ರೀಮತಿ. ಸಂಧ್ಯಾ ಹೊನ್ನವಳ್ಳಿ.



ಅಮೇರಿಕದ ಮಕ್ಕಳು ವಿವಿಧ ಕಲಾ ಕ್ಷೇತ್ರದಲ್ಲಿವರೆಂದು ನಿರೂಪಿಸಲು ಬಂದ ವಾದ್ಯವೃಂದ ಅತಿ ಸುಲಭವಾಗಿ ಪ್ರದರ್ಶನ ನೀಡಿದರು. ಶಾಸ್ತ್ರೀಯ ಹಾಗು ಪಾಶ್ಚಾತ್ಯ ಸಂಗೀತದ ಮಿಶ್ರಣವನ್ನು ವಿವಿಧ ವಾದ್ಯಗಳ ಮೂಲಕ ಮನರಂಜಿಸಿದರು. ಇಂತಹ ಅರಳುತ್ತಿರುವ ಪ್ರತಿಭೆಗಳನ್ನು ಹೊರತರಲು ಶ್ರಮವಹಿಸಿ ತರಬೇತಿ ನೀಡಿದ ಶ್ರೀಮತಿ. ಸ್ಮಿತ ಬಿಂಡಿಗನವಳ್ಳಿ, ಶ್ರೀಮತಿ. ಜಯಶ್ರೀ ವಿದ್ಯಾಶಂಕರ್ ಹಾಗು ಶ್ರೀಮತಿ. ಸುಮನ ಹೆಗ್ಡೆಯವರು ನಮ್ಮ ಕನ್ನಡ ಸಂಘದ ಅಂಶವಾಗಿರುವುದು ಹೆಮ್ಮೆ ಪಡುವ ವಿಷಯವಾಗಿದೆ.

ನಮ್ಮ ಸಂಸ್ಕೃತಿಯಲ್ಲಿ "ಅಮ್ಮನ" ಸ್ಥಾನ ಬಹಳ ದೊಡ್ಡದು. ಮಕ್ಕಳು ಎಷ್ಟೆ ತುಂಟತನ ಮಾಡಿದರೂ, ಅಮ್ಮನ ಮನ ಸೋಲುವುದು ಸಹಜ. ಇಂತಹ ಒಂದು ಸುಂದರವಾದ ದೃಶ್ಯವನ್ನು ಶ್ರೀಮತಿ. ಸುಶ್ಮಾ ರಂಗಸ್ವಾಮಿ ಹಾಗು ಶ್ರೀಮತಿ. ಸಹನಾ ಸುನಿಲ್ ನಮ್ಮ ಮುಂದಿಡುವುದರಲ್ಲಿ ಯಶಸ್ವಿಯಾಗಿದ್ದಾರೆ. ನಂತರ ಶ್ರೀಮತಿ. ಅನು ಅಪ್ಪಾಜಿಯವರ ಮುಂದಾಳತ್ವದಲ್ಲಿ "ಭಾಗ್ಯಾದ ಲಕ್ಷ್ಮಿ ಬಾರಮ್ಮ" ದೇವರನಾಮವನ್ನು ಮಕ್ಕಳು ಚೊಕ್ಕವಾಗಿ ಹಾಡಿದರು. ಇದರಿಂದ ಮಕ್ಕಳು ಕನ್ನಡ ಭಾಷೆಯ ಮೇಲಿಟ್ಟಿರುವ ಪ್ರೀತಿ, ಅಭಿಮಾನ ಗೊತ್ತಾಗುತ್ತದೆ.

ಕನ್ನಡ ರಾಜ್ಯೋತ್ಸವವನ್ನು ಗಮನದಲ್ಲಿಟ್ಟುಕೊಂಡು ಕನ್ನಡ ಮಾತೆಯನ್ನು ನಮಿಸುತ್ತಾ, ಕನ್ನಡದ ಬಾವುಟವನ್ನು ಹಿಡಿದು, ನಮ್ಮ ಭಾಷೆಯ ಹಿರಿಮೆಯನ್ನು ಕೊಂಡಾಡಲೆಂದು ಬಂದ ಮಕ್ಕಳು ಸಾಮೂಹಿಕ ನೃತ್ಯವನ್ನು ಕ್ರಮಬದ್ಧವಾಗಿ ನೆರೆವೇರಿಸಿದರು. ಈ ಕಾರ್ಯಕ್ರಮದ ಹಿರಿಮೆ ಶ್ರೀಮತಿ. ಪ್ರೀತಿ ರಾವ್ ಗೆ ಸಲ್ಲತಕ್ಕದ್ದು. ಇದರ ಹಿಂದೆಯೇ ಬಂದ ಭರತನಾಟ್ಯ ಪ್ರದರ್ಶನ ಶ್ರೀಮತಿ. ಮಮತಾ ದೀಪಕ್ ರವರಿಗೆ ಹೆಮ್ಮೆ ತಂದು ಕೊಟ್ಟಿತು. ಸಂಭ್ರಮದ ಸೊಬಗು ಹೆಚ್ಚಿಸಲು ಶ್ರೀಮತಿ. ಜಯಶ್ರೀ ಮೂರ್ತಿ ನೇತ್ರತ್ವದಲ್ಲಿ ಕಲಿತ ನೃತ್ಯ - "ಸುವ್ವಿ ಸುವ್ವಾಲಿ" ಹಾಡಿಗೆ ಮಕ್ಕಳು ಕುಣಿದು ಕುಪ್ಪಳಿಸಿದರು.


ಶ್ರೀಮತಿ. ರಾಜಶ್ರೀ ರಮೇಶ್ ಮುಂದಾಳತ್ವದಲ್ಲಿ ನಡೆಯುತ್ತಿರುವ ಮಲ್ಲಿಗೆ ಕನ್ನಡ ಸಂಘವು ಈ ವರೆಗೆ ನಡೆದಿರುವ ಎಲ್ಲಾ ಕಾರ್ಯಕ್ರಮಗಳ ಒಂದು ಚಿಕ್ಕ ವರದಿಯನ್ನು ಪ್ರೇಕ್ಷಕರ ಮುಂದಿಟ್ಟರು. ನಂತರ ಸಂಘದ ಉಪಾಧ್ಯಕ್ಷ ಶ್ರೀಯುತ. ಶ್ರೀನಾಥ್ರವರು ಎಲ್ಲಾಸದಸ್ಯರಿಗೆ, ಸ್ವಯಂಸೇವಕರಿಗೆ ಹಾಗು ನೆರೆದಿದ್ದ ಪ್ರೇಕ್ಷಕರಿಗೆ ವಂದನಾರ್ಪಣೆ ಸಲ್ಲಿಸಿದರು.

ಕೊನೆಯದಾಗಿ ಮೂಡಿ ಬಂದ ಶ್ರೀ. ಮಧು ಶಾಸ್ತ್ರಿಯವರ ಹಾಸ್ಯ ನಾಟಕ ಕಿವುಡು ಸಾರ್ ಕಿವುಡು ಎಲ್ಲರನ್ನು ನಕ್ಕು ನಲಿಸುವುದರಲ್ಲಿ ಯಶಸ್ವಿಯಾಯಿತು. ಇಷ್ಟೆಲ್ಲಾ ಕಣ್ಣಿಗೆ ಮನೋರಂಜನೆಯಾಗುವ ವೇಳೆಗೆ ಹೊಟ್ಟೆ ಸಾಕಷ್ಟೇ ಕಾದಿತ್ತು ಹಾಗೇ ಸ್ವಾದಿಷ್ಟ ಭೋಜನವೂ ಕಾದಿತ್ತು. ಈ ಎಲ್ಲಾ ಕಾರ್ಯಕ್ರಮಗಳು ಕುಂದು ಕೊರತೆಗಳಿಲ್ಲದೆ ಮುಕ್ತಾಯ ಕಾಣಲು ಬಹಳಷ್ಟು ಜನರ ಹಿನ್ನೆಲೆ ಕೆಲಸ ಹಾಗು ಶ್ರಮ, ಈ ಮಲ್ಲಿಗೆ ಸಂಘದಲ್ಲಿ ಕಾಣಬಹುದಾದುದು ಸಂತೋಷದ ಸುದ್ದಿಯಾಗಿದೆ. ಇಂತಹ ಕಾರ್ಯಕ್ರಮಗಳು ಹೀಗೆ ಮುಂದುವರೆಯಲಿ ಎಂದು ಹಾರೈಸುವೆ!

# ಸಂಕ್ರಾಂತಿ ರಂಗೋಲಿ

- ಪೂರ್ಣಿಮ ನಿಖಿಲ್





## ಖೋ-ಖೋ ಕತೆ

(ಖೋ-ಖೋ ಕತೆ ಇತ್ತೀಚೆಗೆ ಜನಪ್ರಿಯವಾಗಿರುವ ಕತೆ ಕಟ್ಟುವ ಆಟ. ಒಂದೇ ಕತೆಯನ್ನು ಹಲವರು ಬರೆಯುವುದು. ಸಂಚಿಕೆಯಿಂದ ಸಂಚಿಕೆಗೆ ಕತೆ, ವಿವಿಧ ಕತೆಗಾರರ ಕಲ್ಪನೆಯ ಕುಸುರಿಯಲ್ಲಿ ಬೆಳೆಯುತ್ತಾ ಹೋಗುತ್ತದೆ. ಸಮಕಾಲೀನ ಸಮಸ್ಯೆಯೊಂದರ ಹಲವು ಮಗ್ಗುಲುಗಳನ್ನು ಸರಳವಾಗಿ, ವಿಭಿನ್ನ ದೃಷ್ಟಿಕೋನಗಳಲ್ಲಿ ವಿವರಿಸುವುದು ಈ ಕತೆಯ ಉದ್ದೇಶ. ಖೋ-ಖೋ ಕತೆಯಲ್ಲಿ ನಿಮ್ಮೆಲ್ಲರ ಒಳನೋಟಗಳಿಗೆ ಅವಕಾಶ ಉಂಟು, ಬನ್ನಿ, ನೀವೂ ನಿಮಗನ್ನಿಸಿದ್ದನ್ನು ಬರೆಯಿರಿ.)

## ಎನ್ನ ನೀತಿಯ ಕುರುಡು

ಭಾಗ 1 – ಪೂರ್ಣಿಮ ಸುಬ್ರಹ್ಮಣ್ಯ



**"ಎ**ನ್ನ ನೀತಿಯ ಕುರುಡಿನೆಂದೆನ್ನ ರಕ್ಷಿಸೈ" - ಕುವೆಂಪುರವರ ಗೀತೆ ಶಿವಮೊಗ್ಗ ಸುಬ್ಬಣ್ಣನವರ ಸುಶ್ರಾವ್ಯ ಕಂಠದಲ್ಲಿ ಕೇಳಿಬರುತ್ತಿತ್ತು. ಕಾರು ನಡೆಸುವಾಗ ತನ್ನ ಇಷ್ಟದ ಭಾವಗೀತೆಗಳನ್ನು ಕೇಳುವುದು ಕ್ಷಮಳ ಅಭ್ಯಾಸ. ದೈನಂದಿನ ಜಂಜಡಗಳು ಚೈತನ್ಯ ಬತ್ತಿಸಿದಾಗ, ಸಮಸ್ಯೆಗಳು ತಲೆ ಕೊರೆಯುವಾಗ - ಯಾವುದೋ ಹಾಡು, ಯಾವುದೋ ಸಾಹಿತ್ಯ ಅವಳಿಗೆ ನೆಮ್ಮದಿ ಕೊಟ್ಟಿವೆ. ಯಾರೋ ಎಂದೋ ಬರೆದ ಸಾಲುಗಳು ಸರಳ ಸತ್ಯಗಳಾಗಿ ಹೊಳೆದಿವೆ, ಸಮಾಧಾನ ತಂದಿವೆ. ತಾಯಿನಾಡನ್ನು ಬಿಟ್ಟು ದೂರದ ಅಮೆರಿಕೆಗೆ ಬಂದ ಮೇಲಂತೂ ಅವಳ ಈ ಮೋಹ ಇನ್ನೂ ಹೆಚ್ಚಿದೆ.

ಇಂದಂತೂ ಅವಳ ಮನಸ್ಸು ಗೊಂದಲಗಳ ಗೂಡು. ಮಗಳು ನೀತಿಯ ವಿಷಯದಲ್ಲಿ ನಾವು ತಪ್ಪು ಮಾಡಿದೆವೇ? ಅವಳಿಗೆ ಕೊಟ್ಟ ಸ್ವಾತಂತ್ರ್ಯ-ಸಲಿಗೆ ಜಾಸ್ತಿ ಆಯ್ತೇ? ಅಥವಾ ಅಮೆರಿಕೆಗೆ ಬಂದಿದ್ದೇ ತಪ್ಪಾಯ್ತೇ? ಭಾರತದಲ್ಲಿ ಇದ್ದರೂ ಇಂತಹ ಪರಿಸ್ಥಿತಿ ಬರುತ್ತಿರಲಿಲ್ಲ ಎಂದು ಹೇಗೆ ಹೇಳುವುದು? ಈಗ ನಮ್ಮ ದೇಶಕ್ಕೆ ತಿರುಗಿ ಹೋಗಲು ಸಾಧ್ಯವೇ? - ಹಲವು ಪ್ರಶ್ನೆಗಳು ಅವಳ ಸುತ್ತ ಗಿರಕಿ ಹೊಡೆಯುತ್ತಿದ್ದವು.

ಇಷ್ಟಕ್ಕೂ ನೀತಿ ತಂದ ಸಂಕಟವಾದರೂ ಏನು? ಇಲ್ಲೇ ಹುಟ್ಟಿ ಬೆಳೆದ ಎಲ್ಲ ಭಾರತೀಯ ಮಕ್ಕಳಂತೆ, ಅವಳೂ ಸಹ ಎರಡು ವಿಭಿನ್ನ ಸಂಸ್ಕೃತಿಗಳ ನಡುವೆ ಕಟ್ಟಿದ ತಂತಿಯ ಮೇಲೆ ನಾಜೂಕು ನಡಿಗೆ ನಡೆಯುತ್ತಿರುವವಳೇ. ಅವಳು ಬಯಸಿದ್ದು ಈ ನಾಜೂಕು ತಂತಿಯ ಬದಲು ಸೇತುವೆಯೊಂದನ್ನು! ಇದು ಮಗಳು ನೀತಿಯ ತಪ್ಪೇ? ಅಥವಾ ನನ್ನ ನೀತಿ-ನಿಯಮ-ಮೌಲ್ಯಗಳೇ ಕುರುಡೇ?

ಸಂಪ್ರದಾಯಬದ್ಧ ಕುಟುಂಬದಲ್ಲಿ ಬೆಳೆದ ಕ್ಷಮಾಗೆ ಮನೆಯಲ್ಲಿ ವಿಪರೀತ ಸಲಿಗೆ ಇರದಿದ್ದರೂ, ಇಚ್ಛೆ ಪಟ್ಟಿದ್ದನ್ನು ಓದುವ, ಮಾಡುವ ಸ್ವಾತಂತ್ರ್ಯವಿತ್ತು. ಆ ಸ್ವಾತಂತ್ರ್ಯವನ್ನು ಅವಳು ಎಂದೂ ದುರುಪಯೋಗ ಮಾಡಿಕೊಂಡವಳಲ್ಲ. ಮದುವೆಯಾದ ಹೊಸದರಲ್ಲಿಯೇ ಗಂಡನೊಡನೆ ಸ್ವಲ್ಪ ಕಾಲಕ್ಕೆಂದು ಅಮೆರಿಕೆಗೆ ಬಂದವಳು, ಇಲ್ಲೇ ನೆಲೆನಿಂತದ್ದೂ ಆಯ್ತು. ಮಗಳು ನೀತಿ ಹುಟ್ಟಿದ್ದೂ ಇಲ್ಲೇ. ಅವಳ ಬಾಲ್ಯ, ಶಾಲೆ, ಹಾಡು, ನೃತ್ಯ, ಆಟ-ಪಾಠ ಮೊದಲಾದುವುಗಳಲ್ಲಿ ಸಮಯ ಸರಿದಿದ್ದೇ ತಿಳಿಯಲಿಲ್ಲ. ಈಗ ನೋಡಿದರೆ ಈ ಸಮಸ್ಯೆ...

ಯೋಚನೆಯಲ್ಲಿ ಮುಳುಗಿದ್ದ ಕ್ಷಮಾಗೆ ಮನೆ ಬಂದದ್ದೇ ತಿಳಿಯಲಿಲ್ಲ. ಕಾರ್ ನಿಲ್ಲಿಸಿ ಮನೆಗೆ ಬಂದವಳಿಗೆ ಎದುರಾದವಳು ನೀತಿ.

(ಮುಂದುವರಿಯುವುದು)

*ಎಳ್ಳಿಗೆ ಎಣ್ಣೆಗೆ ಮಿಂಚುವ ಕಣ್ಣಿಗೆ ಹಂಚುವ ಬೆಲ್ಲವ ತನ್ನೀರೇ*

*- ಚೆನ್ನವೀರ ಕಣವಿ*

# ಚಿಣ್ಣರ ಚಿತ್ತಾರ

ಈ ಚಿತ್ರಗಳು ಕನ್ನಡಪ್ರಭದ ಮಕ್ಕಳ ದಿನಾಚರಣೆ ವಿಶೇಷ ಪುರವಣಿಯಲ್ಲಿ ಪ್ರಕಟವಾಗಿದ್ದವು.
ನಿತಿನ್ ಮತ್ತು ಪ್ರಿಯಾಗೆ ಅಭಿನಂದನೆಗಳು.






ಪ್ರಿಯಾ ರಾವ್







ನಿತಿನ್ ಚಿಕ್ಕೋಡಿ

ಸಂಕ್ರಾಂತಿ ತರಲಿ ಶುಭಕ್ರಾಂತಿ

# ಕನ್ನಡ ಕಲಿ

## ಚಂದಮಾಮ ಓಡಿ ಬಾ

- ಈಕ್ಷಾ ಅನಿಲ್



ಚಂದಾ ಮಾಮಾ ಓಡಿ ಬಾ


ಚಂದಾ ಮಾಮಾ ಓಡಿ ಬಾ
ಚಂದದಿಂದ ಆಡು ಬಾ
ಬಂದು ಒಡನಾಡು ಬಾ
ಮುಂದೆ ಹಿಂದೆ ಓಡಿ ಬಾ
ಸಕ್ಕರೆ ಕಡಿ ತಿನಿಸ್ತೇನಿ
ಬಿಸ್ಕಿಟ್ ತಿನಿಸಾ ಕೊಡ್ತೀನಿ
ನಕ್ಕರೆ ನಾನು ನಕ್ಕೇನಿ
ಅತ್ತರೆ ನಾನು ಅಳ್ತೇನಿ
ಬೆಳಗ ಹೋಗಿದರು ಬರತೀಯಾ
ಅಲ್ಲಿ ಮೋಡದಲ್ಲಿ ಇರತೀಯಾ
ಮೆಲ್ಲಗೆ ನೆಲ್ಲಗೆ ಆಡ್ತೀಯಾ
ಹಿಂದೆ ಮುಂದೆ ಓಡ್ತೀಯಾ
ಚಂದಾ ಮಾಮಾ ಓಡಿ ಬಾ
ಚಂದದಿಂದ ಆಡು ಬಾ

– ಈಕ್ಷಾ ಅನಿಲ್
1st Grade – UA

"ಕಲಿ"ಎನ್ನುವುದಕ್ಕೆ ಕ್ರಿಯಾಪದವಾಗಿ "ಅರಿವು ಗಳಿಸು" ಎಂಬ ಅರ್ಥವೂ , ನಾಮಪದವಾಗಿ "ವೀರ"ಎಂಬ ಅರ್ಥವೂ ಇದೆ. ಈ ಅಂಕಣದ ಉದ್ದೇಶವೂ ಈ ಪದಗಳಲ್ಲೇ ಅಡಗಿದೆ.
ಕಲಿ =
To learn (Verb),
Hero (Noun)

## ಅಜ್ಜಿಗೊಂದು ಕಾಗದ

- ಅರ್ಚನ ಮೂರ್ತಿ



ಕ್ಷೇಮ ಶ್ರೀ

ಪ್ರೀತಿಯ ಅಜ್ಜಿ ಹಾಗು ತಾತನಿಗೆ,

ಅರ್ಚನ ಮಾಡುವ ನಮಸ್ಕಾರಗಳು.

ಇಲ್ಲಿ ನಾವೆಲ್ಲರೂ ಕ್ಷೇಮ. ಅಲ್ಲಿ ಎಲ್ಲರೂ ಕ್ಷೇಮವೆಂದು ನಂಬಿದ್ದೇನೆ. ಮಾನ್ವಿ, ನಾನು ಮತ್ತೆ ನಮ್ಮ ಭರತನಾಟ್ಯದ ಶಾಲೆಯಾ ಮಕ್ಕಳು "ಶಂಕರ ನೃತ್ಯಾಲಯ" ಎಂಬ ಸಂಸ್ಥೆಗೆ ಭರತನಾಟ್ಯ ಮಾಡಿದೆವು. "ನಟೇಶ ಕೌತ್ವಂ"ಗೆ ನಾಟ್ಯ ಮಾಡಿದೆವು. ನಾವು ಸಂಗೀತದಲ್ಲಿ ಮುಂದಿನ ಗೀತೆಗಳನು ಕಲಿಯುತ್ತಿದ್ದೇವೆ. ಒಂದು ವರ್ಣ "ಸಿನ್ನ ಕೋರಿ", ಅಂತ ಕಲಿಯುತ್ತಿದ್ದೇವೆ. ನಾನು ಮತ್ತೆ ಆದಿತ್ಯ ಆಗಾಗ್ಗೆ ಚದುರಂಗದ ಪಂದ್ಯಕ್ಕೆ ಹೋಗುತ್ತಿರುತ್ತೇವೆ. ಬೇಸಿಗೆ ರಜದಲ್ಲಿ ಅಲ್ಲಿಗೆ ಬರಬೇಕೆಂಬ ಆಸೆ. ನೀವಿಬ್ಬರೂ ದಿನಾಗಲೂ "ವಾಕಿಂಗ್" ಮಾಡುತ್ತಾ ಇದ್ದೀರಾ? ಟೀ.ವೀ. ಸೀರಿಯಲ್-ಗಳನ್ನು ದಿನಾಗಲೂ ನೋಡುತ್ತಿರುತ್ತೀರಾ? ಅತ್ತೆ ಮಾವಂದಿರಿಗೆಲ್ಲಾ ನನ್ನ ನಮಸ್ಕಾರಗಳನ್ನು ತಿಳಿಸುವುದು. ಎಲ್ಲರಿಗೂ ಹೊಸ ವರ್ಷದ ಶುಭಾಶಯಗಳನ್ನು ತಿಳಿಸುವುದು.

ಇಂತಿ ನಮಸ್ಕಾರಗಳು,

ನಿಮ್ಮ ಪ್ರೀತಿಯ ಮೊಮ್ಮಗಳು,

ಅರ್ಚನ

# ಪದಬಂಧ

- ನಾಗಶ್ರೀ ಶ್ರೀನಿವಾಸ್



| | | | | | | | | |
|---|---|---|---|---|---|---|---|---|
| 1D, 1A | | – | 2D | | ■ | ■ | ■ | ■ |
| | ■ | ■ | | ■ | ■ | 5D, 5A | | 6D |
| 2A | | ■ | | ■ | ■ | | ■ | |
| | ■ | ■ | 6A | | 8D | | ■ | |
| ■ | 4A | 4D | | ■ | | ■ | ■ | |
| ■ | ■ | | ■ | 7A | | ■ | ■ | |
| 3D, 3A | | | ■ | ■ | ■ | 8A | 7D | |
| | ■ | ■ | ■ | ■ | ■ | ■ | | ■ |

### ಎಡದಿಂದ ಬಲಕ್ಕೆ (ACROSS)

1. ಹಬ್ಬ ಬಂತು, ಹಂಚಿ ತಿನ್ನಿ ಒಳ್ಳೆ ಮಾತಾಡಿ(4)
2. ಗಂಗಾಧರೇಶ್ವರನನ್ನು ಇಲ್ಲಿ ನೋಡಲು ತಲೆ ಬಗ್ಗಿ ನಡೆಯಿರಿ (2)
3. ಪ್ರಾಸಕ್ಕಿಂತ ಮಧುರವಾಗಿದೆ ಈ ಗಾನ (3)
4. ವರುಷಕ್ಕೆ ಇದು ಹನ್ನೆರಡು (3)
5. ಹಬ್ಬ ಬಂತು, ಮಕ್ಕಳಿಗಂತೂ ಎಂಥಾ ಸಂತೋಷ ಸಡಗರ (3)
6. ಪೂಜೆಗಳಲೆಲ್ಲಾ ಇವನಿಗೆ ಮೊದಲ ಸ್ತುತಿ (4)
7. ಬೆಟ್ಟದ ಮೇಲೆ ತಂಗುವ ಸ್ಥಾನ (2)
8. ಶಕುಂತಲೆ, ದುಷ್ಯಂತನ ಮಗ (3)

### ಮೇಲಿಂದ ಕೆಳಕ್ಕೆ (DOWN)

1. ಚಳಿಯಲ್ಲಿ ಮರದಿಂದ ಇವುಗಳು ಉದುರೇ ಹೋಗಿವೆ(4)
2. ಹುಣ್ಣಿಮೆಯ ಚಂದ್ರನ ಬೆಳಕು ಎಂಥಾ ಸುಂದರ(5)
3. ಪದ್ಯದ ಕರ್ತೃ (2)
4. ಬುವಿಯಿಂದ ಇಲ್ಲಿಗೆ ಏಣಿ ಉಂಟೇ? (3)
5. ಜನವರಿ ಬಂತು, ಈ ಹಬ್ಬಕ್ಕೆ ಸಿದ್ಧವೇ? (3)
6. ಈ ಸಿನಿಮಾದಲ್ಲಿ ಸಾಹಸಸಿಂಹನ ನಟನೆಯಷ್ಟೇ, ಯೇಸುದಾಸ್ ಗಾಯನವೂ ಅದ್ಭುತ (6)
7. ಬೆಟ್ಟದ ದೃಶ್ಯ ಎಂಥಾ ಸುಂದರ(2)
8. ಭಾರತದಿಂದ ಅಮೆರಿಕಾಕ್ಕೆ ದೂರದ ಯಾಣ (3)

ಉತ್ತರಗಳು ಪುಟ 16

*ಕನ್ನಡವೆಂದರೆ ಬರಿ ನುಡಿಯಲ್ಲ ಹಿರಿದಿದೆ ಅದರರ್ಥ*

*- ನಿಸಾರ್ ಅಹಮದ್*

## *The Karma of Forwarding Emails*

## *Bhagvad Gita – 19 th Chapter*

– Unknown Author

Arjun : Hey Vasudev, how can I do the most heinous and unpardonable act of forwarding email that I receive, to my friends, relatives and revered elders?

Krishna: Paarth, at this moment, none of them is your friend or foe, relative or in-law, young or old and good or evil. You have no escape from following your Net-Dharma. Make haste to log on and send off the email to one and all. That is the only Karma expected of you and Dharma you must follow.

Arjun: Hey Murari! Do not implore me to do something that pricks my conscience and stirs my soul.

Krishna: O Kunti-Putra, you are caught in the vicious circle of Maya. In this material world, you are committed to no one except to yourself, your Dharma and your mouse. emails have existed for the last 25 years and will remain long after you are gone. Rise above the Maya and perform your bounden duty.

Arjun: Lord Krishna, pray and enlighten me on how email is related to Maya.

Krishna: Vatsa, email is the 6th element in the universe – Aap, Vaayu, Jal, Agni, Aakaash and email. It is at the same time animate and inanimate, living and dead beat. It overloads the system and fills up the hard disk. But it serves one great purpose. It leads people to believe that they are filling their time in an intellectual pursuit by reading and re-forwarding mail. It gives them a sense of achievement without investing their intellect and efforts. Like the Atman that leaves one's physical body and moves on to another, the email moves from system to system and never gets deleted or dies.

Arjun: Great Giridhaari, kindly tell me what the true attributes of email are.

Krishna: Neither fire can burn it, nor air can evaporate it. Neither can it be conquered nor can it be defeated. Email is omnipresent and immortal like your noble and eternal soul. Unlike an arrow shot from your bow, many a time the email forwarded by you, will even return to you safely after some months or even years, allowing you to re-re-forward it to the same people.

Arjun: Great Saarathi, my salutations to you. You have opened my eyes to the cult of email. I was lost in the Maya and have been reading all the email that I keep receiving and doing no other Karma. Now on, I will just press the "Forward" button without reading any of it and send it to all and sundry, friends and foes, relatives and in-laws, young and old. That will surely bring them to their knees in this epochal battle of Good against Evil, in the Kurukshetra.

Krishna: Arjuna, victory or defeat is not in your hands. Do not ponder over the fruits of your labour. Just keep forwarding email and make one and all go bananas reading it and you will have done your supreme duty. Tathastu.

## ಉತ್ತರ ಕರ್ನಾಟಕ ಧಾಟಿಯಲ್ಲಿ ಹಾಲಿವುಡ್ ಸಿನಿಮಾಗಳು

(ಸಂಗ್ರಹ: ರಮೇಶ್ ಮೇಲ್ಕೋಟೆ)

| | |
|---|---|
| Bend it like Beckham | ಬಸಪ್ಪನ ಗತೆ ಬಗ್ಗಿಸು |
| What lies beneath | ಬಡ್ಯಾಗ್ ಏನ್ ಐತಿ |
| Saving Private Ryan | ಹವಾಲ್ದಾರ್ ರಾಮ್ಯಾನ ಉಳಸ್ರಿ |
| Honey I shruck the kids! | ಏ ಇಕಿನ, ನಾ ಹುಡುಗನ್ನ ಈಟ ಮಾಡೀನಿ |
| Body heat | ಮೈಯಾಗಿನ್ ಬಿಶಿ |
| Devil's Advocate | ದೆವ್ವನವರ್ ವಕೀಲ್ |
| Spiderman | ಜಡ್ ಬೂಡ್ ಮನ್‌ಷಾ |
| Harry Potter and the Sorcerer's Stone | ಹರ್ಯಾ ಕುಂಬಾರ ಮತ್ತು ಜಾದುಗಾರ್ ನ ಕಲ್ಲು |
| Terminator(*ing Arnold Schwazzenegger) | ಮುಗ್ಸಾಂವ್(*ing ಆರ್ನಾಲ್ಡ್ ಶಿವಾಜಿನಗರ್) |
| American Pie | ಬೆಳಗಾಂವ್ ಕುಂದಾ |
| American Pie 2 | ಧಾರವಾಡ್ ಪೇಡಾ |
| American Pie 3 | ಧಾರವಾಡ್ ಪೇಡಾ |
| Edward Scissorhands | ಎಶ್ವಾಲ್ ಕತ್ರಿ ಕೈಯಾಂವ್ |
| The Italian job | ಇಟಗಿನ್ಯಾಗಿಂದ ಕೆಲಸಾ |
| Die another day | ಇನ್ನೊಂದ್ ದಿವಸ್ ಸಾಯಿ |
| Home alone | ಮನ್ಯಾಗ್ ಒಬ್ನ |
| Gladiator | ಗ್ಯಾಂಗ್ ವಾಡಿ ಗುಂಡ್ಯಾ |
| Big trouble in Little China | ಚಿದಂಬರ್ ನಗರ್ ನ್ಯಾಗ್ ದೊಡ್ಡ ಲಫಡಾ |
| Sleepless in Seattle | ಶೆರಿ ಗಲ್ಲೀ ನ್ಯಾಗ್ ನಿದ್ದಿನ ಇಲ್ಲ |

*ನಗು ನಗುತಾ ನಲೀ ನಲೀ ಏನೇ ಆಗಲಿ*

ಮುಖಪುಟ

## ಅಭಿನಂದನೆಗಳು

**ಮ**ಲ್ಲಿಗೆ ಕನ್ನಡ ಸಂಘದ ಸದಸ್ಯರಾದ , Gravpevine ನಗರದಲ್ಲಿರುವ ಶ್ರೀಮತಿ ಸತ್ಯ ಮತ್ತು ಶ್ರೀ ಫಣಿಶಾಯಿ ದಂಪತಿಗಳ ಮನೆಗೆ ಕಳೆದ ಸೆಪ್ಟೆಂಬರ್ನಲ್ಲಿ ಪುಟಾಣಿ ಅದಿತಿಯ ಆಗಮನವಾಗಿದೆ. ಮಲ್ಲಿಗೆ ಸಂಘದ ಕಾರ್ಯಕಾರಿ ಸಮಿತಿ  ಹಾಗು ಸಂಘದ ಎಲ್ಲಾ ಸದಸ್ಯರ ಪರವಾಗಿ ಅವರ ಕುಟುಂಬಕ್ಕೆ ಅಭಿನಂದನೆಗಳು, ಮುದ್ದು ಅದಿತಿಗೆ ಶುಭ ಹಾರೈಕೆಗಳು.



## ಅಭಿನಂದನೆಗಳು

ಮಲ್ಲಿಗೆ ಸಂಘದ ಸದಸ್ಯರು ಹಾಗೂ ನಮ್ಮ ಗೆಳೆಯರಾದ ರವಿ ಮತ್ತು ನಿರುಪಮಾ ಶರ್ಮಾ ಅವರ ಸುಪುತ್ರ ಅನಿರುದ್ಧ ಇತ್ತೀಚೆಗೆ ಆಸ್ಟಿನ್ ವಿಶ್ವವಿದ್ಯಾನಿಲಯ ಸೇರಿರುವ ವಿಷಯ ಕೇಳಿರಬಹುದು. ಅನಿರುದ್ಧ, ತನ್ನ ತರಗತಿಯ 725 ವಿದ್ಯಾರ್ಥಿಗಳಲ್ಲಿ 2ನೇ ಸ್ಥಾನವನ್ನು ಗಳಿಸಿ, Flower Mound ಶಾಲೆಯ Salutatorian ಆಗಿ ಹೆಸರು ಗಳಿಸಿ, ಬೇರೆ ಮಕ್ಕಳಿಗೆ ಮಾದರಿಯಾಗಿದ್ದಾನೆ. ಪ್ರೌಢ ಶಾಲೆಯಲ್ಲಿ ಅವನು Varsity Chamber Orchestra member, Eagle Scout, National Merit Scholar ಮತ್ತು National AP Scholar with Distinction ಕೂಡ ಆಗಿದ್ದ. Cornel Research scholarship ನೊಂದಿಗೆ ಇತರ ಬೇರೆ ಬೇರೆ ಕಾಲೇಜುಗಳಿಂದ ಅವನಿಗೆ ಆಹ್ವಾನ ಬಂದಿದ್ದರೂ ಅವನು ನಮ್ಮ ರಾಜ್ಯದಲ್ಲೇ ಉಳಿಯಲು ನಿರ್ಧರಿಸಿ ಪೂರ್ತ ವಿದ್ಯರ್ಥಿವೇತನದೊಂದಿಗೆ University of Texas at Austin ಅಲ್ಲಿ ಈಗ Biomedical Engineering ಓದುತ್ತಿದ್ದಾನೆ.



**A**nirudh Sharma is the son of Ravi and Nirupama Sharma. He was a National Merit Finalist and National AP Scholar with Distinction at Flower Mound High School, graduating as the Salutatorian (rank 2 of 735) of his class. He was also a member of the Varsity Chamber Orchestra, an Eagle Scout in Boy Scout Troop 256, and a member of UIL and BPA teams. After receiving offers from several schools, including a prestigious research scholarship to Cornell University, Anirudh chose to attend the University of Texas at Austin. He is currently studying biomedical engineering on a full scholarship.

ಮಲ್ಲಿಗೆ ಸಂಘದ ಕಾರ್ಯಕಾರಿ ಸಮಿತಿ  ಹಾಗು ಸಂಘದ ಎಲ್ಲಾ ಸದಸ್ಯರ ಪರವಾಗಿ ಅನಿರುದ್ಧ ಶರ್ಮನಿಗೆ ಹಾರ್ದಿಕ ಅಭಿನಂದನೆಗಳು. ಹಾಗು ಅನಿರುದ್ಧನ ಅದೃಷ್ಟಶಾಲಿ ಮಾತ-ಪಿತರಾದ ನಿರುಪಮ ಮತ್ತು ರವಿ ಶರ್ಮರಿಗೂ, ಸಹೋದರ ಅಂಕಿತ್ ಶರ್ಮಾಗೂ ನಮ್ಮೆಲ್ಲರ ಅಭಿನಂದನೆಗಳು.

On behalf of MKANT Executive Committee and all the members of MKANT, we would like to heartily congratulate Anirudh Sharma on his achievements. We extend our congratulations to the lucky parents Nirupama and Ravi Sharma, his brother Ankit Sharma.

*ಎಲ್ಲಾದರು ಇರು, ಎಂತಾದರು ಇರು, ಎಂದೆಂದಿಗು ನೀ ಕನ್ನಡವಾಗಿರು - ಕುವೆಂಪು*

## ಪರಿಚಯ



- ಮೀನಾ ಭಾರದ್ವಾಜ್

ಪ್ರೌಢ ಶಾಲೆಯನ್ನು ಮುಗಿಸಿ ಕಾಲೇಜಿನ ಪ್ರವೇಶಕ್ಕೆ ತೆಗೆದುಕೊಳ್ಳುವ ಪರೀಕ್ಷೆಯಲ್ಲಿ ಒಂದಾದ ಎಸ್. ಏ. ಟಿ ಪರೀಕ್ಷೆಯಲ್ಲಿ ಪರಿಪೂರ್ಣ ಅಂಕ ಗಳಿಸಿದ ವಿದ್ಯಾರ್ಥಿಗೆ ಸ್ಥಳೀಯ ಪತ್ರಿಕೆಗಳಲ್ಲಿ ಒಂದಾದ Dallas Morning News ಕೇಳಿದ ಪ್ರಶ್ನೆ ಮುಂದೆ ಏನು ಆಗ ಬೇಕು ಅಂತ ಇದ್ದೀಯ?? ಉತ್ತರ ನಾನು ಇಂಜಿನೀರ್ ಅಥವಾ ವೈದ್ಯನಾಗಬೇಕೆಂದಲ್ಲ..ಮುಂದೆ ಒಂದು ದಿನ ಸ್ಥಳೀಯ ಕ್ರೀಡಾ ತಂಡ 'ಕೌ ಬಾಯ್ಸ್' ತರಹದ ಒಂದು ವೃತ್ತಿಪರ ಕ್ರೀಡಾ ತಂಡದ ಒಡೆಯನಾಗಬೇಕೆಂಬ ಬಯಕೆ. ಇಂಥ ಉನ್ನತ ಬಯಕೆಯನ್ನು ಕೇಳಿ ಇತರರಿಗೆ ಆಶ್ಚರ್ಯವಾಗುತ್ತಿತ್ತೇನೋ! ಆದರೆ ಕರಣ್ ಅರಕೋಟರಾಮ್‌ನನ್ನು ಹತ್ತಿರದಿಂದ ಬಲ್ಲವರಿಗೆ ಇದರಲ್ಲಿ ಯಾವುದೇ ಸಂದೇಹವಿರಲ್ಲಿಲ್ಲ.

ಬಾಲ್ಯದ ದಿನಗಳಿಂದಲೂ ತನ್ನ ವಯಸ್ಸಿಗೆ ಮೀರಿದ ಪ್ರೌಢತೆ. 2 ವರುಷದ ಚಿಣ್ಣ 100 ತುಂಡುಗಳ ಒಂದು puzzleನ್ನು ಮುಗಿಸುತ್ತಿದ್ದುದು, ಮನೆಗೆ ಬಂದ ತಂದೆ ತಾಯಿಯ ಸ್ನೇಹಿತರಿಗೆ ಎಷ್ಟು ಕಡಿಮೆ ಸಮಯದಲ್ಲಿ ಆ puzzleನ್ನು ಮುಗಿಸಬಹುದು ಎಂದು ಸವಾಲು ಎಸೆದು ತಾನು ಮುಗಿಸುತ್ತಿದುದು ಪೋಷಕರಿಗೆ ಅಚ್ಚರಿಯನ್ನೇ ತರುತ್ತಿತ್ತು. ಯಾವುದೇ ರೀತಿಯ ಪುನರಾವೃತ್ತಿ ಪ್ರಕೃತಿಯ ಕೆಲಸವನ್ನು ಇಷ್ಟ ಪಡದೆ ಸದಾ ಹೊಸತನ್ನು ಹುಡುಕಿ ಕೊಳ್ಳುವುದು, ತನಗೆ ತಾನೇ ಸವಾಲನ್ನು ಸೃಷ್ಟಿಸಿಕೊಂಡು ಅದರಮೇಲೆ ಕೆಲಸಮಾಡುವುದು ಸಾಮಾನ್ಯವಾಯಿತು. ಮುಂದೆ ಶಾಲೆಗೆ ಹೋಗಲು ಶುರು ಮಾಡಿದಾಗಲಂತೂ ಯಾವುದೇ ವಿಷಯದಲ್ಲೂ ಕರಣ್ ಮೇಲೆ ಗಮನ ಕೊಡುವ ಪ್ರಸಂಗವೇ



ಬರಲಿಲ್ಲವೆಂದು ಅರಕೋಟರಾಮ್ ದಂಪತಿಗಳು ಅಭಿಮಾನದಿಂದ ಹೇಳಿಕೊಳ್ಳುತ್ತಾ ಒಂದು ಉದಾಹರಣೆಯನ್ನು ಮುಂದೆ ಇಡುತ್ತಾರೆ. ಆರಂಭದಲ್ಲಿ ಆಸ್ಟಿನ್ನಲ್ಲಿ ಇದ್ದ ಈ ಕುಟುಂಬ ಸ್ಥಳೀಯ ನಗರದಲ್ಲಿ ಒಂದಾದ ಪ್ಲೇನೋಗೆ ಬಂದಾಗ ಶಾಲೆಯ ಪ್ರವೇಶಕ್ಕೆ ಹೋದರು. ಅವರಿಗೆ ಕರಣ್ ಪ್ರತಿಭಾವಂತ ಮಕ್ಕಳಿಗೆ ಇರಬಹುದಾದ ಪ್ರತ್ಯೇಕ ಕಾರ್ಯಕ್ರಮದಲ್ಲಿ ಕರಣ್ ಇದ್ದನೆಂದು ತಿಳಿಸಿದರು. ಅವನನ್ನು ಈ ವರುಷ ಅಂತ ಕಾರ್ಯಕ್ರಮಕ್ಕೆ ಹಾಕಲಾಗುವುದಿಲ್ಲ ಮುಂದಿನ ವರುಷ ಅದಕ್ಕಾಗಿ ನಡೆಯುವ ಪರೀಕ್ಷೆಯಲ್ಲಿ ಪಾಸಾಗಿ ಅರ್ಹತೆಯನ್ನು ಪಡೆಯಬೇಕು. ಕರಣ್ ನ ಅರ್ಹತೆ ಬಗ್ಗೆ ಚೆನ್ನಾಗಿ ತಿಳಿದಿರುವ ತಾಯಿ ಲತಾ ಮರುಮಾತಾಡದೆ ಬಂದರಂತೆ. ಮುಂದಿನ ವಾರದಲ್ಲೇ ಅವನ ಶಾಲೆ ಇಂದ ದೂರವಾಣಿ ಕರೆ. "ನಿಮ್ಮ ಮಗ ಕರಣ್ ಅತ್ಯಂತ ಪ್ರತಿಭಾವಂತ ಹುಡುಗ ಅವನಿಗೆ ಈಗಿರುವ ತರಗತಿಯಲ್ಲಿ ಮುಂದುವರಿಸಲು ಆಗುವುದಿಲ್ಲ ಅವನಿಗೆ ಹೆಚ್ಚು ಸ್ಪರ್ಧಾತ್ಮಕವಾಗಿರದೇ ಬೇಸರವಾಗಬಹುದು ಅವನನ್ನು Gifted and Talented ಕಾರ್ಯಕ್ರಮಕ್ಕೆ ಸೇರಿಸಲಾಗುವುದು. "

ಮಾಧ್ಯಮಿಕ ಶಾಲೆಯಲ್ಲಿರುವಾಗ ಕೌಂಟಿಗಳ ನಡುವೆ ನಡೆಯುವ ಕವನ ಸ್ಪರ್ಧೆಯಲ್ಲಿ ಬಹುಮಾನ, ಚರ್ಚಾ ಸ್ಪರ್ಧೆಗಳಲ್ಲಿ ಭಾಗವಹಿಸುವಿಕೆ, ವಿಜ್ಞಾನ ಪ್ರದರ್ಶನದಲ್ಲಿ ರಾಷ್ಟ್ರೀಯ ಮಟ್ಟದಲ್ಲಿ ಭಾಗವಹಿಸಿದಾಗಲಂತು ಇವನಿಗೆ ವಿಭಿನ್ನ ಕ್ಷೇತ್ರದಲ್ಲಿ ಆಸಕ್ತಿ ಇರುವುದು ಖಚಿತವಾಯಿತು. ಪಠ್ಯೇತರ ಚಟುವಟಿಕೆಗಳಿಗೆ ಮೀಸಲಾದ ವಿವಿಧ ಕ್ಲಬ್ ಗಳಲ್ಲಿ ತನ್ನನ್ನು ತಾನು ತೊಡಗಿಸಿಕೊಂಡು ಭಾಗವಹಿಸುತ್ತಿದ್ದ ಕರಣ್. ಕ್ಲಬ್ ಗಳಲ್ಲಿ ಒಂದಾದ FBLA(Future Business Leaders Association) ನ ಮೂಲಕ ರಾಷ್ಟ್ರಮಟ್ಟದಲ್ಲಿ ನಡೆದ ಸ್ಪರ್ಧೆಯಲ್ಲಿ ಎರಡು ಭಾರಿ ಸತತವಾಗಿ ವಿಜೇತನಾಗಿ ಬಂದನು. ಇದೇ ರೀತಿ ಸ್ಥಳೀಯ ವಿಶ್ವವಿದ್ಯಾನಿಲಯವಾದ ಯು.ಟಿ. ಡಿಯಲ್ಲಿ ಬೇಸಿಗೆ ಇಂಟರ್ನ್‌ಶಿಪ್‌ನಲ್ಲಿ ನಡೆಸಿದ ಸಂಶೋಧನೆಯನ್ನು Texas A&M universityಯು ಆಯ್ಕೆ ಮಾಡಿಕೊಂಡು ವಿಶೇಷ ಪ್ರಶಸ್ತಿಯನ್ನು ಕೊಟ್ಟು ಪುರಸ್ಕರಿಸಿತು. ಇಷ್ಟೆಲ್ಲಾ ಬುದ್ಧಿವಂತನಾದರು ಸ್ನೇಹಿತರ ಪ್ರಕಾರ ಸ್ನೇಹ ಜೀವಿ, ಆರಾಮವಾಗಿ ಮಜಾ ಮಾಡುವ ಹುಡುಗ, ಓದು ಎಂದು ತಲೆ ತಿನ್ನುವ ಕೂಚುಭಟ್ಟನಾಗಲಿ ಅಥವಾ ಪುಸ್ತಕದ ಕೀಟವಾಗಲಿ ಅಲ್ಲ ಎನ್ನುವುದು ಅವನಿಗಿರುವ ಸ್ನೇಹಿತರ ಸಂಖ್ಯೆ ಇಂದ ತಿಳಿಯುತ್ತದೆ.

ಆಡು ಮುಟ್ಟದ ಸೊಪ್ಪಿಲ್ಲವೆನ್ನುವ ನಾಣ್ನುಡಿಯಂತೆ ಎಲ್ಲ ವಿಷಯದಲ್ಲಿ ಆಸಕ್ತಿ ಇದ್ದರು ವಿಶೇಷವಾದ ಆಸಕ್ತಿ ವ್ಯವಹಾರಿಕ ಹಾಗು ವಾಣಿಜ್ಯ ಪ್ರಪಂಚದತ್ತ. SATಯಲ್ಲಿ ಬರಿ ಅದೃಷ್ಟವೆಂಬಂತೆ ಒಂದು ಬಾರಿಯಲ್ಲದೆ ವಿಷಯಕ್ಕೆ (subject) ಸಂಬಂಧಿಸಿದ SATಯಲ್ಲೂ ಪರಿಪೂರ್ಣ ಅಂಕಗಳಿಸಿದ ಹೆಗ್ಗಳಿಕೆ ಇವನದು. ಇದಕ್ಕಾಗಿ ಯಾವುದೇ ತರಬೇತಿ ಕೇಂದ್ರಕ್ಕಾಗಿ ಆಗಲಿ ಹೊರಗಿನ ಸಹಾಯವಾಗಲಿ ತೆಗೆದುಕೊಳ್ಳದೆ ಸ್ವಂತ ಪರಿಶ್ರಮದಿಂದ ಮುಗಿಸಿದ್ದು ಪ್ರಶಂಸನೀಯ. ಇದರಿಂದ ಪ್ರತಿಷ್ಠಿತ ವಿಶ್ವವಿದ್ಯಾನಿಲಯದಲ್ಲಿ ಒಂದಾದ YALEನಲ್ಲಿ ಪ್ರಥಮ ಪಟ್ಟಿಯಲ್ಲೇ ಇವನ ಹೆಸರು ಪ್ರಕಟವಾಯಿತು. ಅಲ್ಲಿ ಸಹ ಓದಿನ ಜೊತೆಗೆ ಅಲ್ಲಿನ ಫುಟ್ಬಾಲ್ ತಂಡದ ವೀಕ್ಷಕ ವರದಿಗಾರನಾಗಿ(commentator), YALE DAILY NEWS ಪತ್ರಿಕೆಗೆ ಒಬ್ಬ ವರದಿಗಾರನಾಗಿ ತನ್ನನ್ನು ತಾನು ತೊಡಗಿಸಿಕೊಂಡನು. ಪತ್ರಿಕೆಯ ಪ್ರಥಮ ಬ್ಲಾಗ್ ಅನ್ನು ಹೊರತಂದ ಕೀರ್ತಿ ಇವನದು. ಪತ್ರಿಕೆಗೆ ಬ್ಯಾಸ್ಕೆಟ್ ಬಾಲ್ ಹಾಗು ಫುಟ್ಬಾಲ್ ತಂಡದ ಅಧಿಕೃತ ವರದಿಗಾರನಾಗಿ ಹಾಗು ಕ್ರೀಡಾ ಕಾಲಂನ ಅಂಕಣಕಾರನಾಗಿ ಕೆಲಸ ಮಾಡಿದ್ದಾನೆ. ಇವನು ಬರೆದ 'Yale on the Trial'ರಾಜಕೀಯ ಚಿತ್ರಣದ ವರದಿಗೆ ರಾಷ್ಟ್ರಮಟ್ಟದ ಮನ್ನಣೆ ದೊರಕಿದೆ. ಇವನಿಗೆ Yaleವಿಶ್ವವಿದ್ಯಾನಿಲಯವು ವಿಶೇಷವಾದ ಸ್ಕಾಲರ್ಶಿಪ್ಪನ್ನು ಕೊಟ್ಟು ಭಾರತದಲ್ಲಿ ಮುಸ್ಲಿಂ ಮಹಿಳೆಯರ ವಿದ್ಯಾಭ್ಯಾಸದ ಬಗ್ಗೆ ಒಂದು ಸಾಕ್ಷ್ಯಚಿತ್ರವನ್ನು ನಿರ್ಮಿಸಲು ಭಾರತಕ್ಕೆ ಕಳುಹಿಸಲಾಯಿತು. ಹಿಂದಿನ ವರುಷ ಅರ್ಥ ಶಾಸ್ತ್ರ ಹಾಗು ಬಿಸಿನೆಸ್ ಲಾನಲ್ಲಿ ಪದವಿಯನ್ನು ಪಡೆದು ಹೊರಬಂದ ಕರಣ್ ಗೆ ಅಮೆರಿಕಾದ ಆರ್ಥಿಕ ಹಿಂಜರಿತದ ನಡುವೆಯೂ ಬಂದ ಉದ್ಯೋಗದ ಕರೆಗಳು 9. ತನ್ನ ಆಸಕ್ತಿಯಂತೆ ಇನ್ವೆಸ್ಟ್ಮೆಂಟ್ ಬ್ಯಾಂಕಿಂಗ್ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿರುವ ಕರಣ್ ಬಗ್ಗೆ ಮಾತಾಡುವುದೆಂದರೆ ಸ್ಥಳೀಯ ಕನ್ನಡಿಗರಿಗೆ ಹೆಮ್ಮೆಯ ವಿಷಯ. ಅವನು ಬರೆದ ಒಂದು ಲಘು ಹಾಸ್ಯದ ಉದಾಹರಣೆ ಇಲ್ಲಿದೆ.

# Memoirs of a 21-year-old

-Karan Arakotaram



I turned 21 on Monday.

When I was a kid, I always daydreamed that year 21 would be my last hurrah — my final year of college basketball before I declared for the NBA draft. Unfortunately, 5-foot-4-inch South Asian point guards aren't exactly professional basketball material.

So instead of getting ready for the draft and dreaming about the Green Room, I'm getting ready for second-round interviews and dreaming of never having to set foot in UCS again.

Even though I realized a long time ago that there was no way in hell that I was going to be a professional athlete, turning 21 made me think about how differently I imagined my life turning out. All my dreams as kid — going pro, starring in a "Space Jam" sequel and dating Britney Spears — have absolutely zero chance of coming true.

It sucks.

I want to go back to when I was 8 years old, when every kid on the playground thought he was going to grow up to be the next Michael Jordan. I want to go back and have an entire world of possibilities open to me. I want to go back and steal some human growth hormone.

It's dumb, but I always wonder whether things could have turned out differently. What if I had spent more time practicing my jump shot and less time playing Madden? What if I hadn't broken my leg in third grade? What if I drank more milk? What if I had actually gotten those Air Jordans for Christmas?

After a miserable zero-point, three-turnover performance in a rec basketball game in sixth grade, I started to come to terms with my athletic destiny (or lack thereof). I tried to rationalize it by telling myself that I was more cut out to be a coach anyway. My dream shifted from going pro to owning a pro team.

And now?

I realize the closest I'm probably ever going to come to professional sports is covering Yale football for the News. It's kind of like figuring out all over again that Santa Claus isn't real.

After daydreaming about "Space Jam" some more, I realize that my now-abandoned athletic dreams are a metaphor for growing up in general. As I get closer and closer to graduation and the real world, it seems like more and more doors are closing. Although I'm incredibly grateful for a mostly satisfactory 21 years, a huge part of me just wants to go back to that third grade blacktop, where the sky was the limit.

So forget being old enough to drink. I'd settle for getting my dreams back.

## ಸಂಪಾದಕೀಯ

ಎಲ್ಲರಿಗೂ ಮಕರ ಸಂಕ್ರಾಂತಿ ಹಬ್ಬದ ಶುಭಾಶಯಗಳು. ಸಂಕ್ರಾಂತಿ ತರಲಿ Someಕ್ರಾಂತಿ ಎನ್ನುವುದು ಒಂದು ಹಳೆಯ, ಆದರೆ ಎಲ್ಲಾ ಕಾಲಕ್ಕೂ ಸಲ್ಲುವ ಹಾರೈಕೆ. ನಮ್ಮ ಈ ಕಂಪು ಸಂಚಿಕೆ, ಸ್ವಲ್ಪ ಮಟ್ಟಿಗೆ Someಕ್ರಾಂತಿಯೇ ಆಗಿದೆ. ಇಂಗ್ಲಿಷ್ ಮತ್ತು ಕನ್ನಡ ಎರಡೂ ಭಾಷೆಗಳ ಬೆಸುಗೆಯನ್ನು ಸಂಚಿಕೆಯ ಒಳಪುಟಗಳಲ್ಲಿ ಕಾಣಬಹುದು. ಎಳೆಯರು, ಯುವಕರು, ಹಿರಿಯರು ಎಲ್ಲರೂ ಹಲವು ವಿಭಾಗಗಳಲ್ಲಿ ತಮ್ಮ ತಮ್ಮ ಕೊಡುಗೆಗಳನ್ನು ಪ್ರೀತಿಯಿಂದ ಕಳಿಸಿದ್ದಾರೆ. ಇದು ಕೇವಲ ಒಂದು ಮಲ್ಲಿಗೆ ಹೂವಿನ ಪರಿಮಳವಲ್ಲ, ಹಲವು ಕುಸುಮಗಳನ್ನು ಕಟ್ಟಿದ ಮಲ್ಲಿಗೆ ಮಾಲೆಯ ಕಂಪು. ಈ ಹಾರದ ಮಾಲೆಕಾರಳಾಗುವುದು ನನಗೆ ಸುಗ್ಗಿಯ ಸಂಭ್ರಮದಷ್ಟೇ ಸಂತಸದ ವಿಷಯ. ನಿಮ್ಮೆಲ್ಲರ ಆಸಕ್ತಿ ಉತ್ಸಾಹಗಳಿಗೆ ನಾನು ಆಭಾರಿ.

ನಮ್ಮ ಅನಿವಾಸಿ ಕನ್ನಡಿಗರ ತವರಿನ ತುಡಿತವನ್ನು ಕಂಡಾಗ ನನಗೆ ನೆನಪಾಗುವುದು; "ಒಂದು ಮಣ್ಣಿನ ಜೀವವೆಂದೂ ಮಣ್ಣಿನಲ್ಲೇ ಉಳಿಯದು, ಸಣ್ಣ ಸಸಿಯೇ ಬೆಳೆದು ಬೇರಿಗೆ ಪಾರಿಜಾತವ ಸುರಿವುದು" ಎಂಬ ಕವಿವಾಣಿ(ಹೆಚ್.ಎಸ್.ವೆಂಕಟೇಶಮೂರ್ತಿ). ನಾವೆಲ್ಲಾ ಎಲ್ಲೋ ಹುಟ್ಟಿ, ಎಲ್ಲೋ ಬೆಳೆದು ಇಲ್ಲಿ ಬದುಕು ಕಟ್ಟಿಕೊಳ್ಳುತ್ತಿರುವವರು. ನಮ್ಮೆಲ್ಲ ಬವಣೆ, ಬದಲಾವಣೆಗಳ ನಡುವೆಯೂ ನಮ್ಮ ಬೇರಿಗೆ ನೀರೆರೆಯೋಣ. ಅಂತಹ ಪ್ರತಿ ಪ್ರಯತ್ನವೂ ಕನ್ನಡದ ಕಂಪನ್ನು ಪಸರಿಸುತ್ತದೆ.

ಸಂಕ್ರಾಂತಿ ಶುಭಕ್ರಾಂತಿ ತರಲಿ , ಸುಗ್ಗಿಯ ಹಿಗ್ಗು ನಿಮ್ಮದಾಗಲಿ

ಶುಭಾಶಯಗಳೊಂದಿಗೆ
ಪೂರ್ಣಿಮ ಸುಬ್ರಹ್ಮಣ್ಯ.

ಹಬ್ಬದ ಸಂಭ್ರಮ ಸಡಗರದ ಜೊತೆ ಈ ರುಚಿಯಾದ ಮತ್ತು ಆರೋಗ್ಯವಾದ ತಿಂಡಿಗಳನ್ನು ಮಾಡಿ ನೋಡಿ, ಸವಿಯಾದ ಸಂಕ್ರಾಂತಿಯನ್ನು ಆಚರಿಸಿ.

## ಗುಳ್‌ಪಾವಟೆ

ಶ್ರೀಮತಿ ಶಾಂತ ಭಟ್ಟ



### ಸಾಮಗ್ರಿಗಳು

1 ಕಪ್ ಸಣ್ಣ ರವೆ
1 ಕಪ್ ಬೆಲ್ಲದ ತುರಿ
1/2 ಕಪ್ ಕೊಬ್ಬರಿ ತುರಿ
3 ಚಮಚ ತುಪ್ಪ
ದ್ರಾಕ್ಷಿ ಗೋಡಂಬಿ
ಏಲಕ್ಕಿ


### ವಿಧಾನ

ಸಣ್ಣ ರವೆಯನ್ನು ಕೆಂಪಗೆ ಹುರಿದುಕೊಳ್ಳಬೇಕು. ಸ್ವಲ್ಪ ತಣ್ಣಗಾದ ಮೇಲೆ 10 ಚಮಚ ಬಿಸಿ ನೀರು ಚುಮುಕಿಸಿ ಮುಚ್ಚಿಡಬೇಕು. ಒಂದು ಪಾತ್ರೆಯಲ್ಲಿ 1/2 ಕಪ್ ನೀರಿಗೆ ಬೆಲ್ಲ ಹಾಕಿ ಕುದಿಸಬೇಕು. ಗೆಜ್ಜೆ ಪಾಕ (ದಪ್ಪ ಕುದಿ) ಬಂದಮೇಲೆ 2 ಚಮಚ ತುಪ್ಪ, ಏಲಕ್ಕಿ ಪುಡಿ, ಕೊಬ್ಬರಿ ತುರಿ ಹಾಕಿ ಎರಡು ನಿಮಿಷ ಕುದ್ದ ನಂತರ ಒಲೆ ಮೇಲಿಂದ ಕೆಳಗಿಳಿಸಿ. ಇದಕ್ಕೆ ಹುರಿದ ರವೆ, ತುಪ್ಪದಲ್ಲಿ ಹುರಿದ ದ್ರಾಕ್ಷಿ ಗೋಡಂಬಿ ಹಾಕಿ ಬೆರೆಸಿ, ಸ್ವಲ್ಪ ಹೊತ್ತು ಮುಚ್ಚಿಟ್ಟು ನಂತರ ಉಂಡೆ ಕಟ್ಟಿ.



## ಮೆಂತ್ಯ ಸೊಪ್ಪಿನ ವಡೆ

ನಂದಿನಿ ಕಂಬಿ



### ಸಾಮಗ್ರಿಗಳು

**2** ಕಪ್ ಕಡಲೆ ಹಿಟ್ಟು
**1** ಕಟ್ಟು ಮೆಂತ್ಯ ಸೊಪ್ಪು
**4-5** ಹಸಿ ಮೆಣಸಿನಕಾಯಿ(ಸಣ್ಣಗೆ ಹೆಚ್ಚಿಕೊಳ್ಳಿ)
**1** ಆಲೂಗೆಡ್ಡೆ (ಬೇಯಿಸಿ ಇಡಿ)
**1/2** ಚಿಕ್ಕ ಚಮಚ ಜೀರ್ಗೆ ಪುಡಿ
ಸ್ವಲ್ಪ ಕೊತ್ತಂಬರಿ ಸೊಪ್ಪು
ಉಪ್ಪು
ಚಿಟಿಕೆ ಸೋಡಾ
ಚಿಟಿಕೆ ಇಂಗು
ಕರಿಯಲು ಎಣ್ಣೆ.

### ವಿಧಾನ

ಮೆಂತ್ಯ ಸೊಪ್ಪನ್ನು ಬಿಡಿಸಿ ಸಣ್ಣಗೆ ಹಚ್ಚಿ ಕೊಳ್ಳಿ. ಅರ್ಧ ಕಪ್ಪು ನೀರಿನಲ್ಲಿ ಸೊಪ್ಪನ್ನು ಹಾಕಿ, ಮುಚ್ಚಳ ಮುಚ್ಚಿ ಸಣ್ಣ ಉರಿಯಲ್ಲಿ 5 ನಿಮಿಷ ಬೇಯಿಸಿಕೊಳ್ಳಿ. ನಂತರ ಇದರ ಜೊತೆ ಬೇರೆ ಎಲ್ಲಾ ಸಾಮಗ್ರಿಗಳನ್ನು ಸೇರಿಸಿ, ಕಲಸಿಕೊಳ್ಳಿ. ಎಣ್ಣೆ ಕಾಯಲು ಇಟ್ಟು, ಕಲಸಿದ ಮಿಶ್ರಣವನ್ನು ಸಣ್ಣ ಉಂಡೆಗಳಾಗಿ ಮಾಡಿ. ತಟ್ಟಿ ಸಣ್ಣ ಉರಿಯಲ್ಲಿ ಕರೆಯಿರಿ.



## ಖರ್ಜೂರದ ಪಾಯಸ

ನಂದಿನಿ ಕಂಬಿ

### ಸಾಮಗ್ರಿಗಳು

**10-15** ಒಣ ಖರ್ಜೂರ
**8** ಟೇಬಲ್ ಚಮಚ ಸಕ್ಕರೆ
**2** ಬಟ್ಟಲು ಹಾಲು
**3-4** ಲವಂಗ
¼ ಟೀ ಚಮಚ ಏಲಕ್ಕಿ ಪುಡಿ
**10** ಬಾದಾಮಿ
**1** ಚಿಟಿಕೆ ಪಚ್ಚಕರ್ಪೂರ

### ವಿಧಾನ


ಖರ್ಜೂರವನ್ನು ನುಣ್ಣಗೆ ಕುಟ್ಟಿ ಪುಡಿಮಾಡಿ ಹಾಲಿನಲ್ಲಿ ಬೇಯಿಸಿ. ನಂತರ ಸಕ್ಕರೆ ಹಾಕಿ, ಬಾದಾಮಿ, ಕೇಸರಿ, ಏಲಕ್ಕಿ, ಪಚ್ಚಕರ್ಪೂರವನ್ನು ಪುಡಿ ಮಾಡಿ ಅದನ್ನು ಹಾಲಿಗೆ ಹಾಕಿ. 2-3 ನಿಮಿಷ ಕುದಿಸಿ. ಈಗ ಪಾಯಸ ಸಿದ್ಧ.



*ಹುಲ್ಲಾಗು ಬೆಟ್ಟದಡಿ, ಮನೆಗೆ ಮಲ್ಲಿಗೆಯಾಗು - ಡಿವಿಜಿ*

## ಅಮೆರಿಕಾ ಪ್ರವಾಸ, ಒಂದು ಪತ್ರ

- ಶ್ರೀಮತಿ ಮುಕ್ತಾ ಮತ್ತು ಶ್ರೀ ದತ್ತಾತ್ರೇಯ



ಜೈ ಕರ್ನಾಟಕ ಮಾತೆ.

ನಾವು ನಮ್ಮ ಪ್ರೀತಿಯ ಮಗ ಸೊಸೆಯರಾದ ಅಮೃತ್ ಚೇತನಾ ರವರ ಆಹ್ವಾನದ ಮೇರೆಗೆ ಪ್ರಪಂಚದ ಸ್ವರ್ಗ ನಗರಿಗಳಲ್ಲಿ ಒಂದಾದ ನಮ್ಮ ಬಹುದಿನಗಳ ಕನಸಿನ ಅಮೆರಿಕಾ "ಡಲ್ಲಾಸ್" ನಗರಕ್ಕೆ 2010 ಸೆಪ್ಟೆಂಬರ್ ಅಂತ್ಯದಿಂದ ಜನವರಿ [2011] 10 ರ ತನಕ ಭೇಟಿ ನೀಡಿದೆವು. ಬಂದ ತಕ್ಷಣ ಡಲ್ಲಾಸ್ 'ಮಲ್ಲಿಗೆ' ಕನ್ನಡ ಕೂಟದಲ್ಲಿ Oct 2ನೇ ತಾರೀಖು ನಡೆದ ಸಮಾರಂಭದಲ್ಲಿ ಮಲ್ಲಿಗೆ ಕನ್ನಡ ಸಂಘದ ಸದಸ್ಯರನ್ನು ಭೇಟಿ ಮಾಡಿದೆವು. ಹೂವುಗಳಲ್ಲಿ ಅತಿ ವಿಶಿಷ್ಟ ಕಂಪು ಬೀರುವ 'ಮಲ್ಲಿಗೆ' ಎಷ್ಟು ಅನ್ವರ್ಥ ಇಲ್ಲಿಯ ಕನ್ನಡ ಸಂಘಕ್ಕೆ. ಅಲ್ಲಿಯ ಒಬ್ಬೊಬ್ಬ ಸದಸ್ಯರು ನಿಜವಾಗಲೂ ಒಂದ ಮಲ್ಲಿಗೆ ಹೂವಿನಂತೆ ಕಂಪನ್ನು ಎಸೆಯುತ್ತಿರುವ ಕಂಪುಗಳು. ಅವರು ನಡೆಸುತ್ತಿರುವ "ಕಂಪು" ಪತ್ರಿಕೆಗೆ ಬರೆಯಲು ಎಷ್ಟು ಇಂಪು ಮನಸ್ಸಿಗೆ.

ಇಲ್ಲಿಯ ಜನರ ನಗೆಯ ಆದರಣೀಯ ಸ್ವಾಗತ, ಆತ್ಮೀಯತೆ, ಸ್ವಚ್ಛತೆ ಬಹಳ ಭಾರತದ ಬೆಂಗಳೂರಿನ ಕನ್ನಡಿಗರಿಗೆ ಮೂಗಿನ ಮೇಲೆ ಬೆರಳಿಡುವಂತೆ ಮಾಡಿದವು. ಅವರ ಸಂಸ್ಕೃತಿ ಕಾರ್ಯಕ್ರಮಗಳು, ಅದರಲ್ಲಿ ಪಾಲ್ಗೊಳ್ಳುವಿಕೆ, ಮಕ್ಕಳನ್ನು ಹುರಿದುಂಬಿಸುವುದು ತಮ್ಮನ್ನು ತಾವು ತೊಡಗಿಸಿಕೊಂಡು ಕಂಪನ್ನು ಬೀರುತ್ತಾ ನಳಿನಿಯಂತೆ ಇರುವ ಬಗ್ಗೆ ತಲೆಬಾಗಿದೆವು. ಇಲ್ಲಿಯ ಸಂಸ್ಥೆಗಳು ನಿಜಕ್ಕೂ ಕೆಚ್ಚೆದೆಗಳು. ಏಕೆಂದರೆ ಇಂದಿನ ದಿನವೇ ಯಾರೊಬ್ಬರ ಸಹಾಯವಿಲ್ಲದೆ ವ್ಯವಸ್ಥಿತ ಯೋಜನೆ (Systamic plan) ಗಳೊಂದಿಗೆ ಅಚ್ಚುಕಟ್ಟಾದ ಸಂಸಾರ ಮಾಡುತ್ತಾ ತಮ್ಮ ಮಕ್ಕಳನ್ನು ಭಾರತೀಯ ಸಂಸ್ಕೃತಿಯ ಕಲಿಯುವಲ್ಲಿ ಪ್ರೋತ್ಸಾಹಿಸಿ ತಾವುಗಳು ಭಾಗವಹಿಸುತ್ತಾ ಇರುತ್ತಾರೆ. ಸ್ನೇಹ ಪರಿಚಯವಾದ ಕೂಡಲೇ ಊಟಕ್ಕೆ ಆಮಂತ್ರಿಸಿ ಅದರ ಸೇವೆಯನ್ನು ಅಚ್ಚುಕಟ್ಟಾಗಿ ಮಾಡುತ್ತಾರೆ. ಅಡುಗೆಯಲ್ಲಿ ಗಂಡ ಹೆಂಡತಿ ಸೇರಿ ಕಡಿಮೆ ಎಂದರೆ 10ರಿಂದ 15 ಬಗೆಯ ಖಾದ್ಯಗಳನ್ನು ಯಥೇಚ್ಛವಾಗಿ ರುಚಿಕರವಾಗಿ ಅತಿ ಅಚ್ಚುಕಟ್ಟಾಗಿ ತಯಾರಿಸಿ ಮನಃಪೂರ್ತಿಯಾಗಿ ಬಡಿಸಿ ಅವರ ಹೃದಯ ವಿಶಾಲತೆ ಕಂಪನ್ನು ಬೀರಿ ನಮ್ಮನ್ನು ಮನಃ ಸಂತೋಷ ಪಡಿಸಿದರು.

ಮಲ್ಲಿಗೆ ಕನ್ನಡ ಸಂಘದವರು ನಡೆಸಿಕೊಟ್ಟ ನವರಾತ್ರಿ ದೀಪಾವಳಿಯ ಕಾರ್ಯಕ್ರಮ ನಿಜವಾಗಲೂ ಸಾವಿರಾರು ಮೈಲಿಯಲ್ಲಿರುವ ಕರ್ನಾಟಕದವರಿಗೆ ಮಲ್ಲಿಗೆಯ ಹಾರ ಸ್ಥಾಯಿಯಾಗಿರುವುದು. ಇದು ಹೊಗಳಿಕೆಯ ವಿಚಾರವಲ್ಲ ವಾಸ್ತವ. ಇಲ್ಲಿಯ ಕಾರ್ಯಕ್ರಮ ವೀಕ್ಷಿಸುತ್ತಾ ಕಾರ್ಯಕ್ರಮದ ನಿರೂಪಣೆ, ಅಚ್ಚುಕಟ್ಟಾದ ಸುಂದರ, ಭವ್ಯತೆ ಮಕ್ಕಳ ಕಲಾ ಕೌಶಲ್ಯತೆ ಹಾಗೂ ನಿಮ್ಮಗಳೆಲ್ಲರ ಒಗ್ಗಟ್ಟುತನ ಒಂದು ಸುಂದರ ಸಂಸಾರ ನೋಡಿದಂತೆ ಆಯಿತು. ಈ ಕಂಪು ಸದಾ ಬೀರುತ್ತಿರಲಿ ಇದರ ಅನುಭವ ಪಡೆದ ನಾವು ಧನ್ಯರು.

ಅಮೆರಿಕದ ಅತ್ಯಂತ ಅಚ್ಚುಕಟ್ಟಾದ ರಸ್ತೆಗಳು, ನಿಯಮದಂತೆ ನಡೆಯುವ ವಾಹನಗಳು, ಇಡೀ ಅಮೆರಿಕ ಉದ್ಯಾನ ನಗರಿಯಲ್ಲಿ ಸಂಚರಿಸಿದಂತಾಯಿತು. ಇತರ ದೇಶದಲ್ಲಿ ನಮ್ಮ ಮಕ್ಕಳು ಹೆಚ್ಚಿನ ವಿದ್ಯಾಭ್ಯಾಸ ಮಾಡಿ ಕೆಲಸ ಮಾಡುತ್ತಾ ನಮ್ಮ ದೇಶದ ಸಂಸ್ಕೃತಿಯನ್ನು ಉಳಿಸಿಕೊಂಡು ಜೀವನ ಮಾಡುತ್ತಾ ಇರುವುದು ಸಂತೋಷದ ವಿಷಯ. ನಮಗೆ ಈ ಅವಕಾಶವನ್ನು ಒದಗಿಸಿಕೊಟ್ಟ ನಮ್ಮ ಮಕ್ಕಳಾದ 'ಅಮೃತ್ ಚೇತನಾ' ರಿಗೆ ನಾವು ಕೃತಜ್ಞತೆಯನ್ನು ಅರ್ಪಿಸುತ್ತೇವೆ. ನಮ್ಮ ಲಾಸ್ ಏಂಜಲೀಸ್ ಮತ್ತು ಲಾಸ್ ವೇಗಾಸ್ ಪ್ರವಾಸದ ಅನುಭವ ಅತ್ಯಂತ ರಮಣೀಯ ಮತ್ತು ರೋಮಾಂಚಕಾರಿಯಾಗಿತ್ತು. ಎಲ್ಲರಿಗೂ ಹೊಸ ವರ್ಷಕ್ಕೆ ಎಲ್ಲಾ ತರಹದ ಸುಖ, ಸಂತೋಷ ನಲಿವು ಕೊಡಲಿ ಎಂದು ಹಾರೈಸುತ್ತಾ ನಮ್ಮ ತಾಯ್ನಾಡಿಗೆ ಹಿಂದಿರುಗುತ್ತಿದ್ದೇವೆ.

ಇಂತಿ ಶುಭ ನವ ನಮಸ್ಕಾರಗಳೊಂದಿಗೆ

ದತ್ತಾತ್ರೇಯ ಮುಕ್ತಾ

N. Dattatreya.
No. 108, 34th 'B' Cross, 11th Main
Jayanagar 4th 'T' Block

## ಶ್ರದ್ಧಾಂಜಲಿ

Sri. C.S. Shivaramu – (4/1/1935 - 12/19/2010) passed away on 19th December 2010 due to sub-arachnoid brain hemorrhage. He is survived by his beloved wife Smt. Sharada Shivaramu, two sons and their wives and three grandchildren (Aditya, Iksha and Inesh).



Sri C.S.Shivaramu retd from central govt service (BARC/NPC) in 1993 from Mumbai and lead an active yet peaceful life in Bangalore. He was a very social person and at the age of 72 learnt internet technologies so he could stay connected to his grandchildren who called him "Ramu Thatha".

May his soul rest in peace and may his family have the strength and grace to get through each day.

ಮಲ್ಲಿಗೆ ಸಂಘದ ಸದಸ್ಯರಾದ, Irving ನಗರದ Valley Ranch ನ ನಿವಾಸಿ ಶ್ರೀ ಅನಿಲ್ ಶಿವರಾಂ ಅವರ ತಂದೆ ಆತ್ಮಕ್ಕೆ ಶಾಂತಿಯನ್ನು ಕೋರುತ್ತಾ, ಅನಿಲ್ ಶಿವರಾಂ ಮತ್ತು ಸುಷ್ಮಾ ಅನಿಲ್ ಅವರ ಕುಟುಂಬದವರಿಗೂ ದೇವರು ನೆಮ್ಮದಿ ಮತ್ತು ಶಾಂತಿ ನೀಡಲಿ ಎಂದು ಪ್ರಾರ್ಥಿಸುತ್ತೇವೆ.

ಮುಂದಿನ ಸಂಚಿಕೆಯನ್ನು ಯುಗಾದಿ-2011ರ ವೇಳೆಗೆ ಸಿದ್ಧಪಡಿಸಲಾಗುವುದು.ನಿಮ್ಮ ಸಲಹೆ, ಸೂಚನೆ, ವಿಮರ್ಶೆಗಳಿಗೆ ಸದಾ ಸ್ವಾಗತ. ನಿಮ್ಮ ಆಸಕ್ತಿಯ ವಿಷಯ, ವರದಿ, ಪ್ರವಾಸ ಕಥನ, ಅನುಭವ, ಅಭಿಪ್ರಾಯ, ಚಿತ್ರಕಲೆ, ವ್ಯಂಗ್ಯಚಿತ್ರ, ಹೊಸರುಚಿ, ಹಾಡು-ಹಸೆ, ಪತ್ರ, ಪದಬಂಧ, ರಸಪ್ರಶ್ನೆ, ಪ್ರಕಟಣೆ, ವಿಜ್ಞಾನ, ವೈದ್ಯಕೀಯ, ಸಾಮಾಜಿಕ, ರಾಜಕೀಯ, ಪ್ರಚಲಿತ, ಸಾಹಿತ್ಯ, ಸಂಗೀತ, ಚಲನಚಿತ್ರ, ಹಾಸ್ಯ, ವಿಮರ್ಶೆ, ಆರೋಗ್ಯ, ಪುಸ್ತಕ ಪರಿಚಯ, ವಾಣಿಜ್ಯ, ವ್ಯವಹಾರ ಮುಂತಾದ ಯಾವುದೇ ವಿಭಾಗಕ್ಕೆ ಕೊಡುಗೆಗಳನ್ನು mkantcommittee@gmail.com ವಿಳಾಸಕ್ಕೆ ಕಳುಹಿಸಿ.

## ಪದಬಂಧ ಉತ್ತರಗಳು

### ಎಡದಿಂದ ಬಲಕ್ಕೆ(ACROSS)

1. ಎಳ್ಳು-ಬೆಲ್ಲ
2. ಗವಿ
3. ಕವನ
4. ತಿಂಗಳು
5. ಸಂಭ್ರಮ
6. ಗಣಪತಿ
7. ತಾಣ
8. ಭರತ

### ಮೇಲಿಂದ ಕೆಳಕ್ಕೆ (DOWN)

1. ಎಲೆಗಳು
2. ಬೆಳದಿಂಗಳು
3. ಕವಿ
4. ಗಗನ
5. ಸಂಕ್ರಾಂತಿ
6. ಮಲಯಮಾರುತ
7. ರಮ್ಯ
8. ಪಯಣ

*ಬದುಕು ಜಟಕಾಬಂಡಿ, ವಿಧಿ ಅದರ ಸಾಹೇಬ - ಡಿವಿಜಿ*

# How Are Stars Named?

-K.V. Ramaprasad, California



Have you ever tried going to a dark spot away from city lights looking at the sky from there? You'll be amazed at the range of colors and brightness variations of stars in the night sky. Can you guess the number of stars you can see in a very dark sky? Would you think you can see millions of stars? No! At the most you can see about six thousand stars in the sky. That means you probably can't see more than three thousand stars at any given time! Strange, but true!

When you look up in a dark sky you will see stars of many different hues - bluish white, bright white, bright red, orange, yellow and several other colors in between. Some stars visible to naked eye are extremely bright, while a large number of the stars are faint. But have you wondered if these stars had any names?

Many of the bright stars in the sky that you might be able to see even from a light-polluted city sky have proper names. In India, many of these stars were named thousands of years ago and the same names are in vogue today. The names of twenty seven asterisms (stars, or groups of stars) starting with Ashwini, ending with Revathi which are part of the twelve constellations in the zodiac have existed since then. By the way, many of the stars from this list of Indian asterisms are not very bright but they were named because they helped ancient Indians to formulate their calendar based on the movement of Sun and the Moon in the background of these stars.



*The Constellation of Orion (Source: Internet)*

Apart from these, names in Indian languages are available to few other bright stars outside the zodiac as well. The pole star, called 'Dhruva' is probably the most well known of such stars. The word 'Dhruva' in Samskrta means 'constant'. This is a very apt name because the position of this star in the sky never changes and stays constant. The Pole star is a not an exceptionally bright star, but is a notable star because of its position it occupies in the sky. All stars in the sky appear as though they rotate around it. The Pole star never rises or sets, nor does it show any kind of movement in the sky. If you were at the North Pole, you would see the Pole star directly overhead, and all other stars go around, never rising or setting.

Many of the star names in English are taken from their Roman or Greek names. A large number of star names in English come from Arabic as well. For those stars for which there is no native Indian name, Indian stargazers use their international (English) names.

For those stars that don't have proper names, there is a very interesting way of nomenclature. The sky is divided into 88 constellations. Constellations are imaginary star patterns in the sky. Some constellations actually resemble what they are supposed to resemble, and for some constellations, you must have an extremely eccentric imagination to relate a constellation to the figure it is supposed to mean! But that is beside the point. Any star you that you can see, belongs to one constellation or the other. The brightest star in a constellation is normally denoted by the Greek letter alpha, the second brightest beta, the third brightest gamma and so on. Thus, the brightest star in the constellation of Centaur would be called Alpha Centauri; the second brightest star in the constellation Leo would be called Beta Leonis. In this system, the Pole star would be called Alpha Ursa Minoris, because it is the brightest star in the constellation of Ursa Minor. Thus almost every star that has a proper name also has a name based on the constellation and the brightness of the star within the constellation it belongs to.

This method of naming although very useful has given some incorrect names too. For example, the bright red star Betelgeuse is called Alpha Orionis, meaning it is the brightest star in the constellation Orion. But if you look up the sky now to look at Orion, you will notice there is one more star that is brighter than Betelgeuse! That star is Rigel (or Beta Orionis, as you might have guessed). Betelgeuse is a variable star, meaning its brightness varies over time. There was a time when Betelgeuse might have actually looked brighter to bare eyes than Rigel, and that's when this name must have come from and it has stayed on.

Using Greek letters as prefixes to stars would only work for a handful of stars in any constellation. When you look at the sky with a telescope, you'd see thousands of new stars, invisible to naked eye. A new problem of naming these arises. Astronomers have a very interesting way of dealing with this problem.

Just like the Earth is divided by imaginary lines called longitudes from North Pole to South Pole, the sky is also divided by imaginary lines going from the north pole of the sky to the South Pole. Just as there is a prime meridian on Earth (0 degree longitude), there is a 0 hours right ascension (RA) line in the sky. The line that goes through the First point of Aries (The point in sky where the Sun would be seen on the spring equinox) is called 0 hours RA. Any star in sky can be located by its co-ordinates - how many hours (and/or minutes) away from the first point of Aries and how far is it from the equator of the sky. This is very similar to locating a place on the Earth knowing the longitude and latitude.

Now you must be guessing how this helps in naming stars! Every star in a constellation is given a number by the order of right ascension. As an example, the star within the area marked for the constellation Virgo and with the least right ascension will be labeled 1 Virginis. The star with next higher right ascension will be 2 Virginis and so on. Here there is no correlation between the number and the brightness of the star.

The first few months of the year are a treat to star gazers. There are a bunch of bright stars and constellations in the eastern sky. So what are you waiting for? There are many resources on the Internet to help you identify the stars and constellations. Get out and check out constellations Orion, Taurus, Gemini, Auriga and Perseus shining in the winter sky with bright stars like Sirius, Betelgeuse, Rigel, Aldebaran and Procyon. The three stars from the belt of Orion (see figure) and Pleiades star cluster are unmistakable from any corner on the Northern hemisphere. I bet you will have lots of fun star hunting!

## ದೀಪಾವಳಿ ಕಾರ್ಯಕ್ರಮದ ಚಿತ್ರಗಳು



ಹೆಚ್ಚಿನ ಚಿತ್ರಗಳಿಗೆ ಭೇಟಿ ಕೊಡಿ **www.mallige.org**

*Upcoming Events*

**YUGADI—APRIL 2011**

MKANT will be celebrating Yugadi in April 2011. "Members, please take this opportunity to showcase your talents".

*ಕನ್ನಡವೇ ಸತ್ಯ , ಕನ್ನಡವೇ ನಿತ್ಯ - ಕುವೆಂಪು*

ಮುಖಪುಟ